ವರದಿಗಳನ್ನೊಪ್ಪಿಸುವುದು

ಶ್ರೀ ಬಿ. ಆರ್. ಯಾವಗಲ್.— ಅಧ್ಯಕ್ಷರೇ, ಖಾಸಗೀ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಏಳನೆಯ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಎಚ್. ಕೆ. ಕುಮಾರಸ್ವಾಮಿ (ಶ್ರೀ ಶರಣಬಸಪ್ಪ ಮಾಲಿ ಪಾಟೀಲ್ ಅವರ ಪರವಾಗಿ).— ಅಧ್ಯಕ್ಷರೇ, ಖಾಸಗೀ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಏಳನೆಯ ವರದಿಯ ನಿರ್ಣಯಗಳನ್ನು ನಾನು ಅನುಮೋದಿಸುತ್ತೇನೆ.

ಅಧ್ಯಕ್ಷರು.— ವರದಿಯನ್ನು ಸಭೆಗೆ ಒಪ್ಪಿಸಲಾಯಿತು.

SRI. J.A. FERNANDEZ (Chairman- Committee on Papers).— Sir I present the Fifth Report of the Committee on Papers laid on the Table.

ಅಧ್ಯಕ್ಷರು.— ವರದಿಯನ್ನು ಸಭೆಗೆ ಒಪ್ಪಿಸಲಾಯಿತು.

ಗಮನ ಸೆಳೆಯುವ ಸೂಚನೆ

ಕೋಲಾರ ಜಿಲ್ಲೆಯ ಶಿಡ್ಲಘಟ್ಟದಲ್ಲಿ ನಡೆದ ಕೋಮು ಗಲಭೆ ಹಾಗೂ ಶಾಸಕರ ಮೇಲೆ ಹಲ್ಲೆಯ ಬಗ್ಗೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಕೋಲಾರ ಜಿಲ್ಲೆ ಸುತ್ತಮುತ್ತ ಹಳ್ಳಿಗಳಲ್ಲಿ ಹಬ್ಬಿದ ಕೋಮು ಗಲಭೆಯ ಹಾಗೂ ಕೆಲವು ಶಾಸಕರ ಮೇಲೆ ನಡೆದ ಹಲ್ಲೆಯ ಬಗ್ಗೆ ಗೃಹ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಅಧ್ಯಕ್ಷರು.— ಮಾನ್ಯ ವೆಂಕಟರಾಮಯ್ಯನವರು ತಾವು ಮಂತ್ರಿಗಳ ಗಮನ ಸೆಳೆಯಿರಿ ಎರಡಕ್ಕೂ ಒಟ್ಟಿಗೆ ಉತ್ತರ ಕೊಡುತ್ತಾರೆ.

ಶ್ರೀ ಆರ್. ವೆಂಕಟರಾಮಯ್ಯ.— ಕೋಲಾರ ಜಿಲ್ಲೆಯ ಕ್ಯಾಲನೂರು ಮತ್ತು ಸುತ್ತಮುತ್ತ ಕೋಮು ಗಲಭೆ ನಡೆದು ಅಪಾರ ಆಸ್ತಿಪಾಸ್ತಿ ನಷ್ಟವಾದ ಬಗ್ಗೆ ಮಾನ್ಯ ಗೃಹ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ನಾನು ಗಮನ ಸೆಳೆಯುವ ಸೂಚನೆ ಕಳುಹಿಸಿರುವ ವಿಚಾರವನ್ನು ಸಪರೇಟಾಗಿ ಚರ್ಚೆ ಮಾಡಿದರೆ ಒಳ್ಳೆಯದು.

ಅಧ್ಯಕ್ಷರು.— ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಾರೆ. ಆಮೇಲೆ ಕ್ಲಾರಿಫಿಕೇಶನ ಕೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ನೀರಾವರಿ ಹಾಗೂ ಯೋಜನಾ ಮಂತ್ರಿಗಳು).— ದಿನಾಂಕ ೧೮–೫–೧೯೮೮ರಂದು ಮೇಮಗಲ್ ಪೋಲೀಸ್ ಠಾಣೆಯ ಸರಹದ್ದಿನಲ್ಲಿರುವ ಕ್ಯಾಲನೂರು ಗ್ರಾಮದಲ್ಲಿ ಬೆಳಿಗ್ಗೆ ೧೦ ರಿಂದ ೧೧ ಗಂಟೆಗೆ ಸುಮಾರು ೨,೦೦೦ ಮುಸ್ಲಿಂ ಬಾಂಧವರು ಈದ್ಗಾದಲ್ಲಿ ಪ್ರಾರ್ಥನೆ ಸಲ್ಲಿಸಿ ವಾಪಸ್ಸು ಮಸೀದಿಗೆ ಬಂದರು. ಆಗ ಸ್ಥಳೀಯ ಶಾಸಕರಾದ ಶ್ರೀ ಬೈರೇಗೌಡರು ಅವರನ್ನುದ್ದೇಶಿಸಿ ಮಾತನಾಡುತ್ತಿದ್ದಾಗ ಸುತ್ತಮುತ್ತಲಿನ ಸುಮಾರು ೧೦೦೦ ಹಿಂದೂ ಬಾಂಧವರು ಇವರಿಗೆ ಕೀಟಲೆ ಮಾಡಿ ಗಲಾಟೆ ಮಾಡಿದರು. ಪ್ರಸನ್ನ ಮತ್ತು ಪ್ರಕಾಶ್ ಎಂಬ ತರುಣರು ಸುತ್ತ ಮುತ್ತಲಿನ ಹಳ್ಳಿಗಳಿಗೆ ಹೋಗಿ ಶಿಡ್ಲಘಟ್ಟದಲ್ಲಿ ಹಿಂದೂಗಳನ್ನು ಮುಸ್ಲೀಮರು ಕೊಂದು ಹಾಕಿದ್ದಾರೆಂದು ಸುಳ್ಳು ಸುದ್ದಿಯನ್ನು ಹಬ್ಬಿಸಿ ಹಿಂದೂಗಳನ್ನು ಪ್ರಚೋದಿಸಿದರು. ಇಷ್ಟರೊಳಗೆ ಹಿಂದೂ ಮತ್ತು ಮುಸ್ಲೀಮರ ನಡುವೆ ಮಾತಿಗೆ ಮಾತು ಬೆಳೆದು ಗಲಭೆ ನಡೆದು ಕೃಷ್ಣಪ್ಪ ಎಂಬುವವರಿಗೆ ಜಖಂ ಆಯಿತು. ಈ ಗಲಭೆಗಳಲ್ಲಿ ಹಿಂದೂಗಳ ೬ ಗುಡಿಸಲುಗಳು, ೨ ಮನೆಗಳು ಮತ್ತು ೧ ಅಂಗಡಿಗೆ ಮತ್ತು ಮುಸ್ಲೀಮರ ೧೧ ಗುಡಿಸಲುಗಳಿಗೆ ೪ ಮನೆಗಳಿಗೆ ಮತ್ತು ೧ ಅಂಗಡಿ ಹಾಗೂ ಒಂದು ಮಸೀದಿಗೆ ಬೆಂಕಿಯಿಂದ ಲುಕ್ಸಾನು ಮಾಡಿದ್ದಲ್ಲದೆ ಲೂಟಿ ಮಾಡಲಾಯಿತು.

ಸುಮಾರು ೨೫ ಸಣ್ಣ ಪುಟ್ಟ ಸೌದೆ ಡಿಪ್ಪೋಗಳಿಗೆ ಬೆಂಕಿ ಹಚ್ಚಲಾಯಿತು. ಈ ವಿಷಯದ ಬಗ್ಗೆ ಸುಮಾರು ೧೨-೩೦ ಗಂಟೆಗೆ ಶಿಡ್ಲಘಟ್ಟದಲ್ಲಿರುವ ಹಿರಿಯ ಅಧಿಕಾರಿಗಳಿಗೆ ಸುದ್ದಿ ತಿಳಿದು ಕೋಲಾರ ಡಿ. ಎಸ್. ಪಿ. ಯವರಿಗೆ ಸಿಬ್ಬಂದಿಯೊಡನೆ ಕ್ಯಾಲನೂರಿಗೆ ಕಳುಹಿಸಲಾಗಿ ಅಲ್ಲಿ ಬೆಂಕಿ ಮತ್ತು ಲೂಟಿ ಪ್ರಕರಣಗಳು ಇನ್ನೂ ನಡೆಯುತ್ತಿದ್ದವು. ಆಗ ಬೆತ್ತ ಪ್ರಹಾರ ಮತ್ತು ಅಶ್ರುವಾಯು ಪರಿಣಾಮಕಾರಿಯಾಗ ದಿದ್ದಾಗ ಪೋಲೀಸರು ಹಳ್ಳಿಯಲ್ಲಿ ತೊಡಗಿದ್ದ ಜನರ ಮೇಲೆ ಗುಂಡನ್ನು ಹಾರಿಸಿದರು ತಪ್ಪನ ಹಳ್ಳಿಯ ೨೮ ವರ್ಷದ ಮುನೇಗೌಡ ಎಂಬುವವರಿಗೆ ಭಾಷ್ಪ ವಾಯು ಶೆಲ್ ತಲೆಗೆ ತಾಗಿ ಸಾವನ್ನಪ್ಪಿದರು ರಾಮಪ್ಪ ಎಂಬುವವರಿಗೆ ಗುಂಡೇಟಿನಿಂದ ಗಾಯವಾಯಿತು. ಒಟ್ಟು ೨೨ ಭಾಷ್ಪ ವಾಯು ಶೆಲ್‌ಗಳು ಮತ್ತು ೨೨ ರೈಫಲ್ ಗುಂಡುಗಳನ್ನು ಬಳಸಲಾಯಿತು. ಈ ಗಲಭೆಗಳಲ್ಲಿ ಸುಮಾರು ಜನರಿಗೆ ಗಾಯಗಳಾಗಿದ್ದ ನಿರ್ದಿಷ್ಟವಾದ ಸಂಖ್ಯೆಯ ಮಾಹಿತಿಯನ್ನು ಪಡೆಯಲಾಗುತ್ತಿದೆ. ಕೋಲಾರ ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟ್‌ರವರು ಮತ್ತು ಸ್ಥಳೀಯ ಶಾಸಕರು ಶಾಂತಿ ಸಭೆ ಕರೆದು ಪರಿಸ್ಥಿತಿಯನ್ನು ಹತೋಟಿಗೆ ತಂದಿರುತ್ತಾರೆ. ಕೋಲಾರ ಜಿಲ್ಲೆಯ ಎಲ್ಲಾ ಕಡೆ ಪರಿಸ್ಥಿತಿ ಹತೋಟಿಗೆ ಬಂದು ಪ್ರಶಾಂತ ವಾತಾವರಣ ತಿಳಿಯಾಗುತ್ತಿದೆ.

† ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೇ, ಈಗ ಮೊದಲನೆಯದು ಶಿಡ್ಲಘಟ್ಟದಲ್ಲಿ ನಡೆದಂಥ ಘಟನೆಯನ್ನು ಸದನದ ಮುಂದೆ ರೈಸ್ ಮಾಡಿದ್ದೇವೆ. ಆವಾಗ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು ಏನೆಂದರೆ ಪರಿಸ್ಥಿತಿ ಹತೋಟಿಯಲ್ಲಿದೆ, ಅಲ್ಲಿ ಯಾವ ಗಲಾಟೆಯೂ ಕೂಡ ಇಲ್ಲ ಎಂದು. ಮತ್ತು ಇಂತಹ ಸಮಯದಲ್ಲಿ ನಾವು ಈ ಪ್ರಶ್ನೆಯನ್ನು ಕೇಳಬಾರದು, ಇದರಿಂದ ಪರಿಸ್ಥಿತಿ ವಿಕೋಪಕ್ಕೆ ಹೋಗಬಹುದು ಎನ್ನುವಂತಹ ಸಮಾಧಾನದ ಉತ್ತರವನ್ನು ಕೊಟ್ಟರು. ಆಗ ನಾವು ಹೇಳಿದೆವು ನೀವೇ ಖುದ್ದಾಗಿ ಹೋಗಿ ಇದನ್ನು ಪರಿಶೀಲಿಸಿ, ಏಕೆಂದರೆ ಅಲ್ಲಿ ಹಿಂದೂ ಮುಸ್ಲಿಂ ಗಲಾಟೆ ಇದೆ. ಬೇರೆಯವರು ಹೇಳಿದರೆ ಪಕ್ಷ, ಪಂಗಡದ ಪ್ರಶ್ನೆ ಬರಬಹುದು, ಆದಕ್ಕೇ ನೀವು ಹೋಗಿ ಹೇಳಿದರೆ ಅದಕ್ಕೊಂದು ಹೊಸ ರೂಪ ಬರುತ್ತದೆ ಎಂದು ಇದನ್ನು ನಾವು ಹೇಳಿದರೆ ಮಾನ್ಯ ಮುಖ್ಯ ಮಂತ್ರಿಗಳು ತಳ್ಳಿ ಹಾಕಿದರು. ಈಗ ಕೊನೆಗೆ ಪರಿಶೀಲನೆಗೆ ಹೋಗಿದ್ದ ಶಾಸಕರ ತಂಡಕ್ಕೆ ಕಲ್ಲೇಟ್, ದೊಣ್ಣೆಯಿಂದ ಹೊಡೆದು ಸೊಸೈಟಿಗೆ ಕರೆದೊಯ್ದು ಮಾಡಿ ಇಷ್ಟೆಲ್ಲಾ ನಡೆದಿದೆ. ಇದು ಗೊತ್ತಿದ್ದರೂ ಕೂಡ ಪೋಲೀಸರು ಏಕೆ ಪ್ರಿಕಾಷನ್ ತೆಗೆದುಕೊಂಡಿಲ್ಲ ? ಇದನ್ನು ನಾನು ಸ್ಪಷ್ಟವಾಗಿ ಕೇಳಬೇಕಾಗುತ್ತದೆ, ಪೇಪರ್‌ನಲ್ಲಿ ಇಂತಿಂಥ ಶಾಸಕರು ಭೇಟಿ ಏನ್‌ಕ್ವೈರಿ ರಿಪೋರ್ಟ್ ಪಕ್ಷಕ್ಕೆ ಕೊಡುತ್ತಾರೆ ಎಂದು ಬಂದಿತ್ತು. ಇದು ಗೊತ್ತಿದ್ದರೂ ಪೋಲೀಸರಿಗೆ ಗೊತ್ತಿದೆ. ಇದು ರಾಜಧಾನಿಯಿಂದ ನಲ್ವತ್ತು ಕಿಲೋಮೀಟರ್ ದೂರ ಇರತಕ್ಕಂಥ ಸ್ಥಳ, ಹೀಗಿದ್ದರೂ ಇವರಿಗೆ ಪ್ರಿಕಾಷನ್ ತೆಗೆದುಕೊಂಡು ರಕ್ಷಣೆ ಕೊಡಲಿಕ್ಕೆ ಆಗಲಿಲ್ಲ ಎಂದರೆ ನಾಳೆ ಇವರು ಯಾರಿಗೆ ರಕ್ಷಣೆ ಕೊಡುತ್ತಾರೆ ? ಅಲ್ಲಿರತಕ್ಕಂಥ ಜನರಿಗೆ ರಕ್ಷಣೆ ಕೊಡುವುದಕ್ಕೆ ಆಗುವುದಿಲ್ಲ, ಶಾಸಕರಿಗೆ ಕೊಡುವುದಕ್ಕೆ ಆಗುವುದಿಲ್ಲ. ದುರ್ದೈವದಿಂದ ಭದ್ರಾವತಿಯಲ್ಲಿ ಮುಖ್ಯ ಮಂತ್ರಿಗಳಿಗೂ ರಕ್ಷಣೆ ಕೊಡಲಿಕ್ಕೆ ಪೋಲೀಸರಿಂದ ಆಗಲಿಲ್ಲ. ಅಂದರೆ ಎಲ್ಲಿಗೆ ಹೋಗಿ ಮುಟ್ಟುತ್ತಿದ್ದೇವೆ ನಾವು ? ನಾಳೆ ನಮ್ಮ ಮೇಲೆ ಗಲಾಟೆ ಆಗಬಹುದು, ನಾವು ನಮ್ಮ ಕ್ಷೇತ್ರಗಳಿಗೆ ಹೋಗುತ್ತೇವೆ ರಾಜಕೀಯದಲ್ಲಿ ತಮಗೆ ಗೊತ್ತಿರುವ ಹಾಗೆ ಅನೇಕ ಭಾಷಣಗಳನ್ನು ಮಾಡುತ್ತೇವೆ. ವಿರೋಧಪಕ್ಷದವರೂ ಭಾಷಣ ಮಾಡುತ್ತಾರೆ ಮತ್ತು ರೂಲಿಂಗ್ ಪಾರ್ಟಿಯವರೂ ಭಾಷಣ ಮಾಡುತ್ತಾರೆ, ಚಾರ್ಜಸ್ ಕೌಂಟರ್ ಚಾರ್ಜಸ್ ಮಾಡುತ್ತಾರೆ. ಅಂತಹ ಕಾಲದಲ್ಲಿ ರಕ್ಷಣೆ ಸಿಗದೇ ಹೋದರೆ ಹೇಗೆ? ಇದು ನಡೆದಿರುವುದು ಬೆಂಗಳೂರಿಗೆ ೪೦ ಕಿಲೋಮೀಟರ್ ದೂರದಲ್ಲಿ, ಒಬ್ಬ ಮೋಟಾರ್ ಸೈಕಲ್‌ನವನು ಅವರನ್ನು ಅಡ್ಡ ಹಾಕಿ ನಿಲ್ಲಿಸಿ ಇಳಿಸಿಕೊಂಡು ಹೋಗಬೇಕಾದರೆ ಆತನಿಗೆ ಎಷ್ಟು ಧೈರ್ಯ ? ಆ ಮೋಟಾರ್ ಸೈಕಲ್‌ನ್ನು ಸೀಜ್ ಮಾಡಿದ್ದೀರೋ ಹೇಗೆ ? ಅವರ ಮೇಲೆ ಏನಾದರೂ ಚಾರ್ಜ್‌ಶೀಟ್ ಹಾಕಿ ಕಸ್ಟಡಿಯಲ್ಲಿ ತೆಗೆದುಕೊಂಡಿದ್ದೀರೇ ಹೇಗೆ ? ಅವನ ಹೆಸರು ಏನು ? ಮೋಟಾರ್ ಸೈಕಲ್ ನಂಬರ್ ಏನು ? ಈ ವಿವರಗಳನ್ನು ಕೊಡಬೇಕು. ಇನ್ನೊಂದು, ಅವರು ಪ್ರೊಟೆಕ್ಷನ್ ಕೇಳಲಿಲ್ಲ ನಾವು ಕೊಡಲಿಲ್ಲ ಎಂದು ಹೇಳಬಹುದು. ಆದರೆ It is the duty of the police to keep vigil in the area......ಅಲ್ಲಲ್ಲಿ ಯಾವ ರೀತಿ ಇದೆಯೆಂದು ಅಸೆಸ್‌ಮೆಂಟ್ ಮಾಡಬಹುದು. ಯಾವುದು ಡಿಸ್ಟರ್ಬಿಂಗ್ ಪಾಯಿಂಟ್ಸ್ ಇವೆ ಎಂದು ಗೊತ್ತಿಲ್ಲವೆ ? ನಿಮ್ಮಲ್ಲಿ ಇಂಟಲಿಜೆನ್ಸ್ ಇಲ್ಲವೆ ? ಅವರು

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಏನು ಮಾಡುತ್ತಾರೆ ? ಅವರು ಅಲ್ಲಿಗೆ ಹೋಗಿ ತಲುಪಬೇಕಾದರೆ ಕನಿಷ್ಟಪಕ್ಷ ಒಂದು ಗಂಟೆಯಾದರೂ ಬೇಕು. ಆ ಸ್ಥಳದಿಂದ ಮುಂದೆ ಇರತಕ್ಕಂಥ ಶಿಡ್ಲಘಟ್ಟಕ್ಕೆ ಇರುವ ದೂರ ೧೦-೧೫ ಕಿಲೋಮೀಟರ್ ಮಾತ್ರ. ನಿಮ್ಮ ಇಂಟಲಿಜೆನ್ಸ್‌ನವರು ಏನು ಮಾಡುತ್ತಿದ್ದರು ? ಪೋಲೀಸರು ಏನು ಮಾಡುತ್ತಿದ್ದರು ? ಇದರ ಬಗ್ಗೆ ಮಾಹಿತಿ ಬಂದಿರಲಿಲ್ಲವೆ ? ಇದು ಏನು ತೋರಿಸುತ್ತದೆ ಎಂದರೆ The Government is utterly neglecting. The police Department is neglecting. ಅವರ ಮೇಲೆ ನಿಮ್ಮ ಹಿಡಿತ ಇಲ್ಲ, ನಿಮ್ಮ ನಿರ್ಲಕ್ಷ್ಯದಿಂದ ಪೋಲೀಸ್ ನೌಕರರು ಪದೆ ಪದೇ ಬಯ್ಸಿಕೊಳ್ಳುತ್ತಿದ್ದಾರೆ. What were your Intelligence people doing at that time ? who is the man who blocked the vehicles ಇವನ್ನು ತಾವು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಆರ್. ವೆಂಕಟರಾಮಯ್ಯ.—ಸನ್ಮಾನ್ಯ ಅಧ್ಯಕ್ಷರೇ, ಹೋದಸಲ ನಾವು ಇದರ ಬಗ್ಗೆ ರೆಫರೆನ್ಸ್ ಮಾಡಿದಾಗ ನಾನು ಸ್ಪಷ್ಟವಾಗಿ ಹೇಳಿದ್ದೆ, ಶಿಡ್ಲಘಟ್ಟದ ಪರಿಸ್ಥಿತಿ ತುಂಬಾ ಗಂಭೀರವಾಗಿವೆ ಬಾಂಬುಗಳನ್ನು ಹಾಕುತ್ತಿದ್ದಾರೆ ಎಂದು ಹೇಳಿದಾಗ ನಮ್ಮ ಮುಖ್ಯ ಮಂತ್ರಿಗಳವರು ನಂಬಲಿಲ್ಲ. ಇವತ್ತು ಪೇಪರ್‌ನಲ್ಲಿ ನೋಡಿದ್ದೀರಿ. ಎಲ್ಲಾ ಪತ್ರಿಕೆಗಳಲ್ಲೂ ಬಂದಿದೆ.

> " Blast in Sidlaghatta Two men were seriously wounded in Bomb explosion and 300 country-bomb subsequently seized in trouble-torn Sidlaghatta Town which was brought under dusk to dawn curfew--"

This is what is quoted in the Indian Express. The Deccan Herald quotes.

> " Two injured in Sidlaghatta Bomb blast " ....

೧೦-೩೦ ಎ.ಎಂ.

ಇವರೆಲ್ಲರೂ ಯಾರು ಎಂದರೆ ಹೇಳಿದರೆ ಕಲ್ಕತ್ತಾದಿಂದ ಬಂದಿದ್ದಾರೆ. ಎರಡು ಕಾರುಗಳೂ ಕೂಡ ಸೀಜ್ ಆಗಿವೆ. ಅವರು ಡೀಟೈಲ್ಸ್ ಕೊಡುತ್ತಾ ಇಲ್ಲವೆಂದು ತಿಳಿದುಬಂದಿದೆ. ಪ್ರಜಾವಾಣಿಯಲ್ಲಿ ವಿವರವಾಗಿ ಬಂದಿದೆ. ಇದನ್ನು ನಾವು ಗಮನಿಸಿದರೆ ನಮಗೆ ಏನು ತಿಳಿಯುತ್ತದೆ ಎಂದರೆ, ಇಲ್ಲಿ ಯಾವುದೋ ಒಂದು ಡೀಪ್ ಪ್ಲಾಟ್ ಇದೆ ಎನಿಸುತ್ತದೆ. ಶಿಡ್ಲಘಟ್ಟದಲ್ಲಿ ಇಂಥ ಪರಿಸ್ಥಿತಿ ಸಾಧಾರಣವಾಗಿ ಏಪ್ರಿಲ್ ೨-೩ರಿಂದ ಜರುಗುತ್ತಾ ಇದೆ, ಆದರೂ ಕೂಡ ಇವರು ಕಂಟ್ರೋಲ್ ಮಾಡಲಿಲ್ಲವೆಂದು ಹೇಳಿದರೆ, ನಾವು ಇದರ ಬಗ್ಗೆ ಏನು ಯೋಚನೆ ಮಾಡಬೇಕೋ ಅರ್ಥವಾಗುವುದಿಲ್ಲ. ಇಬ್ಬರು ಐ.ಜಿ. ಇದ್ದಾರೆ, ಒಬ್ಬರು ಡಿ.ಐ.ಜಿ. ಇದ್ದಾರೆ. ಇಬ್ಬರು ಎಸ್.ಪಿ. ಗಳಿದ್ದಾರೆ, ೧೪ ಪ್ಲಾಟೂನ್ಸ್, ೧೪ ವ್ಯಾನುಗಳು ಇವೆ, ಕೋಲಾರ ಜಿಲ್ಲೆಯಲ್ಲಿರತಕ್ಕ ಪೋಲೀಸಿನವರು ಎಲ್ಲರೂ ಇದ್ದಾರೆ. ಟೌನ್‌ನಲ್ಲಿರುವ ಪೋಲೀಸರು ೩೫ ಜನ ಮಾತ್ರ. ಇಷ್ಟೆಲ್ಲಾ ಇದ್ದು ಪೋಲೀಸಿನವರು ಏಕೆ ಪರಿಸ್ಥಿತಿಯನ್ನು ಕಂಟ್ರೋಲ್ ಮಾಡಲು ಸಾಧ್ಯವಾಗಲಿಲ್ಲ. ನಮ್ಮ ಲೋಕಲ್ ಎಂ.ಎಲ್.ಎ. ಗಳು ಬಹಳ ಸ್ಟ್ರಗಲ್ ಮಾಡಿದರು. ಇವರು ಮಾಡುತ್ತಿರುವುದು ಏನೆಂದರೆ, ಯಾರು ರೌಡಿ ಲಿಸ್ಟ್‌ನಲ್ಲಿದ್ದಾರೆ ಅವರನ್ನೇ ಶಾಂತಿ ಸಮಿತಿಯಲ್ಲಿ ಸೇರಿಸಿದ್ದಾರೆ. ರೌಡಿ ಲಿಸ್ಟ್‌ನಲ್ಲಿರುವವರನ್ನು ಅರೆಸ್ಟ್ ಮಾಡಲಿ. ಇವರೇ ಇದಕ್ಕೆಲ್ಲಾ ಪ್ರಚೋದನೆ ಕೊಡುವುದಕ್ಕೆ ಕಾರಣ. ಇದರ ಬಗ್ಗೆ ಬಚ್ಚಿಡುವುದು ಬೇಕಾಗಿಲ್ಲ, ಮಾನ್ಯ ಮಂತ್ರಿಗಳಿಗೂ ಗೊತ್ತು. ನಾವು ಹೇಳಿದ್ದೇವೆ, ಇದು ಇಲ್ಲಿಗೇ ನಿಲ್ಲುವುದಿಲ್ಲ, ಇದು ಬೇರೆ ಕಡೆಗೂ ಹೋಗುತ್ತದೆ ಎಂದು, ತಮಗೆ ತಿಳಿದಂತೆ ಇದು ಹೆಚ್ ಕ್ರಾಸ್‌ಗೆ ಹೋಯಿತು, ಸುತ್ತಮುತ್ತ ಇರುವ ಹಳ್ಳಿಗಳಿಗೂ ಹೋಯಿತು. ಶಿಡ್ಲಘಟ್ಟ ಪ್ರಕರಣದಲ್ಲಿ ಕೆಲವರು ಸ್ವಲ್ಪ ಸುಳ್ಳು ಅಪಪ್ರಚಾರ ಮಾಡಿ ಇದು ಕೈವಾರಕ್ಕೂ ಹೋಯಿತು. ಕೈವಾರದಲ್ಲಿ ಆದದ್ದು ತಮಗೂ ಗೊತ್ತಿದೆ. ಅಲ್ಲಿ ಪ್ರಾರ್ಥನೆ ಆದಮೇಲೆ, ಸುಮಾರು ೧ ಸಾವಿರ ಜನ ಇದ್ದರು. ಮಾನ್ಯ ಭೈರೇಗೌಡರು ಇದ್ದರು. ಅವರು ಇದ್ದಾಗಲೇ ಗಲಾಟೆ ಶುರುವಾಯಿತು. ಭೈರೇಗೌಡರು ಎಷ್ಟು ಪ್ರಯತ್ನ ಮಾಡಿದರೂ ಕೂಡ ಕಂಟ್ರೋಲ್ ಮಾಡುವುದಕ್ಕೆ ಆಗಲಿಲ್ಲ. ಭೈರೇಗೌಡರನ್ನೇ ದಬಾಯಿಸಿ,

ಬೇರೆ ಕಡೆಗೆ ಎತ್ತಿಕೊಂಡು ಹೋಗುವಂಥ ಪರಿಸ್ಥಿತಿ ಬಂತು. ಅವರ ಕಾರಿಗೆ ಜಖಂ ಆಯಿತು. ೪ ಗಂಟೆಗಳ ಕಾಲ ಸತತವಾಗಿ ಪ್ರಯತ್ನ ಮಾಡಿದರೂ ಕೂಡ ಯಾವ ಪೋಲೀಸಿನವರೂ ಬರಲಿಲ್ಲ. ಅಲ್ಲಿದ್ದ ಮೂರು ಜನ ಪೋಲೀಸ್ ಕಾನ್‌ಸ್ಟೇಬಲ್ ಬಿಟ್ಟು, ಇನ್ನೊಬ್ಬರೂ ಬರಲಿಲ್ಲ. ಪೋಲೀಸ್ ವ್ಯವಸ್ಥೆ ಸತ್ತಿದೆಯೋ ? ಕೋಲಾರ ಜಿಲ್ಲೆಯಲ್ಲಿ ಪ್ರಪ್ರಥಮವಾಗಿ ಗಲಾಟೆಯಾಗಿದ್ದು ಕ್ಯಾಲನೂರಿನಲ್ಲಿ. ಇದು ಕಮ್ಯೂನಲ್ ಟೆನ್‌ಷನ್ ಇರತಕ್ಕ ಏರಿಯಾ, ಪೋಲೀಸ್ ವ್ಯವಸ್ಥೆಗೆ ಏನು ಬಂದಿದೆ ? ೪ ಗಂಟೆಗಳ ಕಾಲ ಸತತವಾಗಿ ಪ್ರಯತ್ನ ಮಾಡಿ, ೨೦ ಸಲ ಫೋನ್ ಮಾಡಿದರೂ ಕೂಡ ಒಬ್ಬ ಪೋಲೀಸರೂ ಬರಲಿಲ್ಲ. ನಿಮ್ಮ ಇಂಟೆಲಿಜೆನ್ಸ್ ವ್ಯವಸ್ಥೆ ಪೂರ್ಣವಾಗಿ ಹಾಳಾಗಿ ಹೋಗಿದೆಯೋ ? ಇದು ಪ್ರಯೋಜನವೇ ಇಲ್ಲದ ವ್ಯವಸ್ಥೆ ಆಗಿದೆ. ೪ ಗಂಟೆ ಆದ ಮೇಲೆ ಬಂದರು. ಅಷ್ಟು ಹೊತ್ತಿಗೆ ೩೦ ಅಂಗಡಿ, ೨೫ ಕಟ್ಟಿಗೆ ಅಂಗಡಿಗಳಿಗೆ ಬೆಂಕಿ ಹಚ್ಚಿದ್ದರು. ೮–೧೦ ಮನೆಗಳು ಲೂಟಿ ಆಗಿದ್ದವು. ಆಮೇಲೆ ಬಂದು ಇವರು ಮಾಡುವುದು ಏನು ? ಒಂದು ಕಿಲೋಮೀಟರ್ ದೂರದಲ್ಲಿರುವ ಮಾಬ್ ಮೇಲೆ ಫೈರಿಂಗ್ ಮಾಡಿದರು. ಇಬ್ಬರು ಸತ್ತಿದ್ದಾರೆ. ಒಬ್ಬ ಆ ಜಾಗದಲ್ಲಿ ಸತ್ತ, ಇನ್ನೊಬ್ಬ ಅನಂತರ ಸತ್ತಿದ್ದಾನೆ. ಈ ಗಲಾಟೆ ಆಗದಹಾಗೆ ಭೈರೇಗೌಡರು ೨-೩ ಗಂಟೆ ತಡೆಹಿಡಿದಿದ್ದಾರೆ. ಆ ಟೈಮ್‌ನಲ್ಲಿ ಪೋಲೀಸಿನವರೇನೂ ದೂರ ಇರಲಿಲ್ಲ. ತಕ್ಷಣ ಪೋಲೀಸ್ ವ್ಯವಸ್ಥೆ ಬಂದಿದ್ದರೆ, ಈ ಗಲಾಟೆಗೆ ಅವಕಾಶವೇ ಇರುತ್ತಿರಲಿಲ್ಲ. ಪೂರ್ತಿಯಾಗಿ ಲೂಟಿಯಾದ ಮೇಲೆ ಇವರು ಬಂದರು. ಒಂದು ಕಿಲೋಮೀಟರ್ ದೂರದಲ್ಲಿದ್ದವರನ್ನು ಹೊಡೆದರು. ಸದ್ಯಕ್ಕೆ ಲಾಠಿ ಚಾರ್ಜ್ ಮಾಡಿ ಸ್ವಲ್ಪ ಕಂಟ್ರೋಲ್ ಮಾಡಿದರು. ಇವತ್ತು ಶಿಡ್ಲಘಟ್ಟವಾಗಲೀ ಅಥವಾ ಕ್ಯಾಲನೂರು ಆಗಲೀ ವ್ಯವಸ್ಥೆ ಕೆಟ್ಟು ಹಾಳಾಗಿ ಹೋಗಿಲ್ಲವೇ ? ನೀವು ಏಕೆ ಪೋಲೀಸ್ ವ್ಯವಸ್ಥೆಯನ್ನು ಕಂಟ್ರೋಲ್ ಮಾಡಿಲ್ಲ. ಏಕೆ ನಿಮ್ಮ ಇಂಟೆಲಿಜೆನ್ಸ್ ವ್ಯವಸ್ಥೆ ಫೇಲ್ ಆಗಿದೆ. ಕ್ಯಾಲನೂರಿನ ವಿಚಾರ ತಮಗೂ ಗೊತ್ತಿದೆ. ಮೊದಲಿನಿಂದಲೂ communally sensitive area, communal prone area ಎಂದು ಗೊತ್ತು, ಗೊತ್ತಿದ್ದೂ ಕಂಟ್ರೋಲ್ ಮಾಡದೇ ಹೋದರೆ ಹೇಗೆ? ಈಗ ಸತ್ತಿರುವವರು ಎಷ್ಟು? ಇಬ್ಬರು ಸತ್ತಿದ್ದಾರೆ, ಇದರ ಬಗ್ಗೆ ತಾವು ಮೆನ್‌ಷನ್ ಮಾಡಿಲ್ಲ. ಶಿಡ್ಲಘಟ್ಟದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದಮೇಲೆ ಇಬ್ಬರು ಸತ್ತಿದ್ದಾರೆ. ಇದಕ್ಕಿಂತ ಹೆಚ್ಚಾಗಿ, ನಮ್ಮ ಸ್ನೇಹಿತರು ನಮ್ಮ ಕೊಲಿಗ್ಸ್ ಮೂರು ಜನ ಹೋದರು. ಮಾನ್ಯ ರಮೇಶ್‌ಕುಮಾರ್, ಮಾನ್ಯ ರೋಷನ್ ಬೇಗ್ ಮಾನ್ಯ ಮಹದೇವಪ್ಪನವರು ಹೋದರು. ನನಗೆ ನಿಜವಾಗಿ ನಾಚಿಕೆಯಾಗುತ್ತದೆ ನಾವು ತಲೆತಗ್ಗಿಸ ಬೇಕಾಗುತ್ತದೆ. ಸುಮಾರು ೫ ಕಿಲೋಮೀಟರ್ ದೂರದಲ್ಲಿ ಮೇಲೂರು ಮಳ್ಳೂರು ಇದೆ. ಈ ಹಳ್ಳಿಗಳಲ್ಲಿ ಈ ಗಲಭೆ ಹಬ್ಬಿದೆ ಎಂದು ತಮಗೆ ಗೊತ್ತಿದೆ, ಗೊತ್ತಿದ್ದೂ ಕೂಡ ನಮ್ಮ ಕೊಲಿಗ್ಸ್, ನಮ್ಮ ಸ್ನೇಹಿತರು ಹೋದಾಗ, ಎಂತಹ ಏಟುಗಳು ಬಿದ್ದಿವೆ ಎಂಬುದನ್ನು ತಾವೇ ನೋಡಿ. ನಮ್ಮ ಕೊಲಿಗ್ಸ್ ಅವರನ್ನು ಮೂರು ಗಂಟೆಗಳ ಕಾಲ ಬಚ್ಚಿಟ್ಟಿದ್ದಾರೆ. ಕೆಲವರು ಸಹೃದಯಿಗಳು ....

ಶ್ರೀ ಬಿ. ಎನ್. ಬಚ್ಚೇಗೌಡ.—ಮಾನ್ಯ ವೆಂಕಟರಾಮಯ್ಯನವರೇ, ಶಾಸಕರಿಗೆ ಯಾರು ಹೊಡೆದಿದ್ದಾರೆ ಎಂಬುದನ್ನೂ ಹೇಳಿ. ದುಷ್ಕರ್ಮಿಗಳು ಹೊಡೆದರೋ, ರಾಜಕೀಯ ಉದ್ದೇಶ ಇಟ್ಟುಕೊಂಡು ಹೊಡೆದರೋ ಎಂಬುದನ್ನೂ ಹೇಳಿ. ಯಾರ ಕುಮ್ಮಕ್ಕಿನಲ್ಲಿ ಮಾಡಿದರು, ಅಲ್ಲಿ ಕಮ್ಯೂನಲ್ ಗಲಾಟೆ ಇತ್ತೇ ಎಂಬುದನ್ನು ಹೇಳಿ. ಇದನ್ನು ಸುಮ್ಮನೇ ಬಿಟ್ಟರೆ ಆಗುವುದಿಲ್ಲ. ಜಾಸ್ತಿ ಚರ್ಚೆ ಮಾಡುವುದಕ್ಕಿಂತ ಬಿಗಿ ಬಂದೋಬಸ್ತು ಕೊಡಿ ಎಂದು ಹೇಳಿ ಇದರ ಬಗ್ಗೆ ಹೆಚ್ಚು ಚರ್ಚೆ ಅನಾವಶ್ಯಕ.

ಶ್ರೀ ಆರ್. ವೆಂಕಟರಾಮಯ್ಯ.—ದಯಮಾಡಿ ತಾವೇ ಹೇಳಿ...

ಶ್ರೀ ಬಿ. ಎನ್. ಬಚ್ಚೇಗೌಡ.—ತಾವು ಅಲ್ಲಿಗೆ ಹೋಗಿದ್ದೀರಿ, ಆದುದರಿಂದ ತಾವೇ ಹೇಳಬೇಕು.

ಶ್ರೀ ಬಿ. ಲಕ್ಕಪ್ಪ.—ತುಮಕೂರಿನಲ್ಲಿ ಇದೇ ತರಹ ಗಲಾಟೆ ಇದೆ, ಮೊನ್ನೆ ಅಂಗಡಿಗಳನ್ನು ಮುಚ್ಚಿದ್ದಾರೆ ..

ಅಧ್ಯಕ್ಷರು.—ನಿಮ್ಮ ಕಾಮೆಂಟ್ಸ್ ಸಾಕು, ವೆಂಕಟರಾಮಯ್ಯನವರೇ ಮುಗಿಸಿ.

ಶ್ರೀ ಆರ್. ವೆಂಕಟರಾಮಯ್ಯ.—ಅಲ್ಲಿಗೆ ಹೊರಟಿದ್ದ ನಮ್ಮ ಸ್ನೇಹಿತರು ಏನಿದ್ದಾರೆ ಅವರನ್ನು ಮೇಲೂರಿನ ಸೊಸೈಟಿಯಲ್ಲಿ ಇಟ್ಟುಕೊಂಡಿದ್ದರು ಆದರೂ ಅಲ್ಲಿಗೆ ಒಬ್ಬ ಪೋಲೀಸರೂ ಬರಲಿಲ್ಲ. ಲೋಕಲ್ ಮಂದಿ ಅವರಿಗೆ ರಕ್ಷಣೆಯನ್ನು ಕೊಟ್ಟರು. ಅಲ್ಲಿನ ಕೆಲವು ಸಹೃದಯರು ಸೇರಿಕೊಂಡು ನೀವು ಇವರಿಗೆ ಹೊಡೆಯಬಾರದು, ಹೊಡೆದರೆ ನಾವು ನಿಮ್ಮ ಮೇಲೆ ತಿರುಗಿ ಬೀಳುತ್ತೇವೆ ಎಂದು

ಹೇಳಿದಮೇಲೆ ಅವರೆಲ್ಲಾ ಓಡಿ ಹೋದರು. ಆಮೇಲೆ ಅವರು ನಮ್ಮ ಸ್ನೇಹಿತರುಗಳನ್ನು ವ್ಯಾನ್‌ನಲ್ಲಿ ವಿಜಯಪುರಕ್ಕೆ ತೆಗೆದುಕೊಂಡು ಹೋಗಿ ಬಿಟ್ಟರು. ಅಲ್ಲಿಯವರೆಗೆ ಈ ವಿಚಾರವೇ ಪೋಲೀಸರಿಗೆ ಗೊತ್ತಿರಲಿಲ್ಲ. ಇದರಲ್ಲಿ ಒಂದು ರಾಜಕೀಯ ಉದ್ದೇಶ ಕೂಡಾ ಇದೆ.

ಅಧ್ಯಕ್ಷರು.—ತಾವು ಕ್ಲಾರಿಫಿಕೇಷನ್ ಕೇಳಿರಿ

ಶ್ರೀ ಆರ್. ವೆಂಕಟರಾಮಯ್ಯ.—ನಮ್ಮ ಸ್ನೇಹಿತರಲ್ಲಿ ನಾನು ರಿಕ್ವೆಸ್ಟ್ ಮಾಡಿಕೊಳ್ಳುವುದು ಇಷ್ಟೇ, ಯಾರೇ ಆಗಲಿ ಈ ರೀತಿಯ ಕಮ್ಯೂನಲ್ ಟೆನ್‌ಷನ್ ಇರುವಾಗ ಕಾಂಗ್ರೆಸ್‌ನವರಾಗಲೀ, ಜನತಾ ಪಕ್ಷದವರಾಗಲೀ, ಕಮ್ಯೂನಿಸ್ಟ್ ಪಕ್ಷದವರೇ ಆಗಲೀ ಇದನ್ನು ರಾಜಕೀಯ ಉದ್ದೇಶಕ್ಕಾಗಿ ದುರುಪಯೋಗ ಮಾಡಿಕೊಳ್ಳುವುದು ಬೇಡ

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕಮ್ಯೂನಿಸ್ಟ್ ಪಾರ್ಟಿಯವರೇ ಇರಬೇಕೆಂದು ನಾನು ಹೇಳುತ್ತೇನೆ, ಅವರು ಕಲ್ಕತ್ತಾದಿಂದ ಬಂದಿದ್ದರು ಎಂದರೆ ಕಮ್ಯೂನಿಸ್ಟ್‌ಕೈ ಇದರಲ್ಲಿ ಇದೆ ಎಂದು ನಾನು ಹೇಳುತ್ತೇನೆ. We will go for Judicial Probe. Sir, The Member is acting as an agent of Janatha Party Government. He is a tool in their hands. You are doing that you want to destabilise the Govt. ಎಂದು ನಾವು ನಿಮಗೆ ಹೇಳಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೇ, ನೀವು ಈ ರೀತಿ ಮಾತನಾಡಬಾರದು. ಯಾರೇ ಇರಲಿ, ಯಾವ ಪಕ್ಷದವರೇ ಇರಲಿ ಅವರ ಮೇಲೆ ಆಕ್ಷನ್ ತೆಗೆದುಕೊಳ್ಳಿ ಎಂದು ಹೇಳಬೇಕೇ ಹೊರತು, ಹೊಡೆದವರು ಕಾಂಗ್ರೆಸಿಗರು, ಜನತಾದವರು, ಕಮ್ಯೂನಿಸ್ಟ್‌ನವರು ಸಿಪಿಐದವರು ಸಿಪಿಎಮ್‌ನವರು ಎಂದು ಹೇಳಬಾರದು.

(ಗೊಂದಲ)

SRI M. MALLIKARJUNA KHARGE.—Without knowing anything ಒಬ್ಬ ಸದಸ್ಯರು ಈ ರೀತಿ ಪಾರ್ಷಿಯಲ್ ಆಗಿ ಹೇಳುತ್ತಾರೆ ಎಂದರೆ ಇದಕ್ಕೆ ಏನನ್ನಬೇಕು ?

MR. SPEAKER.—You should not say like that. ಈ ರೀತಿ ಹೇಳಬಾರದು, ಸಿಪಿಐ ಇರಲಿ. ಕಾಂಗ್ರೆಸ್ ಇರಲಿ. ಜನತಾ ಇರಲಿ, ಯಾರೇ ಇರಲಿ ಅವರ ಮೇಲೆ ಆಕ್ಷನ್ ತೆಗೆದುಕೊಳ್ಳಿ ಎಂದು ಹೇಳಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದನ್ನು ಇವರು ವಿಥ್‌ಡ್ರಾ ಮಾಡಿಕೊಳ್ಳಬೇಕು.

MR. SPEAKER.—I will expunge it. ನಾನು ಅದನ್ನು ಎಕ್ಸ್‌ಪಂಜ್ ಮಾಡಿರುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಖರ್ಗೆಯವರ ಬಗ್ಗೆ ನನಗೆ ಬಹಳ ಗೌರವ ಇದೆ, ಅವರ ಬಗ್ಗೆ ನಾನು ಯಾವ ವಿಷಯದಲ್ಲೂ ಏನನ್ನೂ ಹೇಳುವುದಿಲ್ಲ. ನನಗೆ ಕಾಂಟ್ರೋವರ್ಸಿ ಬೇಕಾಗಿಲ್ಲ. ಆದರೆ ಲೋಕಲ್ ಮಂದಿ ಬಂದು ಹೊಡೆದಿದ್ದಾರೆ.

ಅಧ್ಯಕ್ಷರು.—ತಾವು ಆ ರೀತಿ ಮಾತನಾಡುವುದು ಸರಿಯಲ್ಲ.

---

*ಅಧ್ಯಕ್ಷರ ಆದೇಶದ ಮೇರೆಗೆ ತೆಗೆದು ಹಾಕಲಾಗಿದೆ.

SRI K.H. PATIL.—Sir, I am on a point of order. Congress organisation is a mighty organisation. ಅದರೊಳಗೆ ಎಷ್ಟು ಜನ ಮೆಂಬರ್ಸ್ ಇದ್ದಾರೆ ಎಂದು ೧೨ ವರ್ಷಗಳ ಕಾಲ ಆ ಪಕ್ಷದ ಪ್ರೆಸಿಡೆಂಟ್ ಆಗಿದ್ದ ನನಗೆ ಗೊತ್ತಿಲ್ಲ. ಇನ್ನು ವೆಂಕಟರಾಮಯ್ಯನವರಿಗೆ ಇದು ಗೊತ್ತಿದೆಯೇ ? ಯಾರು ಯಾರು ಕಾಂಗ್ರೆಸಿಗರು ಎಂದು ಅವರಿಗೆ ಗೊತ್ತಿದೆಯೇ ? ಕಾಂಗ್ರೆಸ್‌ನವರು ಮಾಡಿದ್ದಾರೆ ಎಂದು ಹೇಳಬೇಕಾದರೆ ಬಾಯಿ ಹಿಡಿದು ಮಾತನಾಡಬೇಕಾಗುತ್ತದೆ. ಕಾಂಗ್ರೆಸ್ ಏನೂ ನಿಮ್ಮ ಹಾಗೆ ಮೂರು ಮಂದಿಯ ಪಾರ್ಟಿ ಅಲ್ಲ. Without knowing facts if any party is blamed it has to be taken seriously.

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ಮೂರು ಮಂದಿಯ ಪಾರ್ಟಿ ಎಂದು ಹೇಳುವುದು ಸರಿಯಲ್ಲ. ಆ ರೀತಿ ನೀವು ಹೇಳಬಾರದು

ಶ್ರೀ ಕೆ.ಬಿ. ಶಾಣಪ್ಪ.—ಮೂರು ನಾಲ್ಕು ಮಂದಿ ಎಂದು ಹೇಳುವುದು ಸರಿಯಲ್ಲ. ನಾವೂ ನೂರಾರು ಜನ ಇದ್ದೇವೆ. ಮೂರು ನಾಲ್ಕು ಮಂದಿ ಇದ್ದಾರೆ ಎಂದು ತಮಗೆ ಏನು ಬೇಕಾದರೂ ಹೇಳುವುದಕ್ಕೆ ಬರುತ್ತದೆಯೇ ?

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ನಾನು ಖರ್ಗೆಯವರ ಬಗ್ಗೆ ಹೇಳುತ್ತಿಲ್ಲ, ಎಲ್ಲಾ ಕಾಂಗ್ರೆಸ್‌ನವರ ಬಗ್ಗೆ ಹೇಳುತ್ತಿಲ್ಲ, ಲೋಕಲ್ ಪಾಲಿಟಿಕ್ಸ್‌ನಲ್ಲಿ ಈ ರೀತಿ ಆಗಿದೆ.

(ಗೊಂದಲ)

ಅಧ್ಯಕ್ಷರು.—ಪಾರ್ಟಿ ಹೆಸರು ತೆಗೆದುಕೊಳ್ಳುವುದು ಸರಿಯಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಮುನಿಶಾಮಪ್ಪನವರು ಎಂ.ಎಲ್.ಎ. ಆಗಿದ್ದಾರೆ ಎಂದು ಇದರಲ್ಲಿ ಕೆಲವರು ರಾಜಕೀಯ ತಂದಿದ್ದಾರೆ. ಕಾಂಗ್ರೆಸ್‌ನವರು ಮಾಡುತ್ತಿದ್ದಾರೆ ಜನತಾದವರು ಮಾಡುತ್ತಿದ್ದಾರೆ ಎಂದು ನಾನು ಹೇಳುವುದಿಲ್ಲ. ಲೋಕಲ್‌ನಲ್ಲಿ ಈ ರೀತಿ ಆಗಿದೆ.

ಅಧ್ಯಕ್ಷರು.—ನೀವು ಮಾತನಾಡಿದರೆ ಬರೀ ಕಾಂಪ್ಲಿಕೇಷನ್ ಮಾಡುತ್ತೀರಿ.

ಶ್ರೀ ಆರ್. ವೆಂಕಟರಾಮಯ್ಯ.—ಹೋಗಲಿ ಸಹಾನುಭೂತಿ ಎಂದು ಹೇಳೋಣ ಬಿಡಿ ಸ್ವಾಮಿ. ಸರ್ಕಾರಕ್ಕೆ ನಾನು ಹೇಳುವುದು ಇಷ್ಟೇ. ವಿಚಾರಣೆಯನ್ನು ತಾವು ನಿಷ್ಪಕ್ಷಪಾತವಾಗಿ ಮಾಡಿ ಅದು ಯಾವುದೇ ರಾಜಕೀಯ ಪಕ್ಷದವಾಗಿರಲಿ ಇಂಥಾದನ್ನು ದಮನ ಮಾಡಬೇಕು......

(ಗೊಂದಲ)

ಅಧ್ಯಕ್ಷರು.—ಮಾನ್ಯ ಶ್ರೀ ವೆಂಕಟರಾಮಯ್ಯನವರು ಮಾತನಾಡುತ್ತಾ ಕಾಂಗ್ರೆಸ್ ಎಂದು ಏನು ಹೇಳಿದರು. ಆ ಪದವನ್ನು ನಾನು ಎಕ್ಸ್‌ಪಂಜ್ ಮಾಡಿದ್ದೇನೆ,

ಶ್ರೀ ಆರ್. ವೆಂಕಟರಾಮಯ್ಯ.—ಆಗಬಹುದು ಸ್ವಾಮಿ.

(ಗೊಂದಲ)

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ why do you want to expunge ? It it unparliamentary ?

(ಗೊಂದಲ)

ಶ್ರೀ ಎಸ್.ಆರ್. ಬೊಮ್ಮಾಯಿ.—ಅಧ್ಯಕ್ಷರೇ......

ಶ್ರೀ ಕೆ. ಹೆಚ್. ಪಾಟೀಲ್.—ಅದು ಆನೆ ಪಾರ್ಲಿಮೆಂಟರಿಯಲ್ಲದಿದ್ದರೂ ಇರ್ರೆಲಿವೆಂಟ್ Attacking a particular political party. That should be delated. How can you say congress ? I am a congress-man. Do you think I have a hand in it ? ನಿಮಗೆಷ್ಟು ರಮೇಶ್‌ಕುಮಾರ್‌ರವರ ಬಗ್ಗೆ ಸ್ನೇಹ ಮತ್ತು ವಾತ್ಸಲ್ಯವಿದೆಯೋ ಅದಕ್ಕಿಂತ ಹತ್ತು ಪಟ್ಟು ನನಗೆ ಇದೆ. ಅವರನ್ನು ನಾನು ನಿಮಗಿಂತ ಮೊದಲು ಆಸ್ಪತ್ರೆಗೆ ಹೋಗಿ ಭೇಟಿ ಮಾಡಿದವನು.

ಶ್ರೀ ಎಸ್. ಆರ್. ಬೊಮ್ಮಾಯಿ.—ಇವತ್ತು ಏನೊಂದು ಘಟನೆ ನಡೆದಿದೆ, ಯಾವುದೇ ಪಕ್ಷದ ಕಾರ್ಯಕರ್ತರು ಇರಲಿ, ಸತ್ಯಸಂಗತಿ ಹೊರಗಡೆ ಬಂದರೆ ಒಳ್ಳೆಯದು. ಆದ್ದರಿಂದ ಮಾನ್ಯ ವೆಂಕಟರಾಮಯ್ಯನವರು ಅವರ ಹೆಸರುಗಳನ್ನು ಈ ಸಭೆಗೆ ತಿಳಿಸಿದರೆ ಒಳ್ಳೆಯದು. ನಿಜ ಸಂಗತಿ ಹೊರಗೆ ಬರುತ್ತದೆ......

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾರುಯಾರು ಎಂದು ಅವರಿಗೆ ಗೊತ್ತಿದ್ದರೆ ಹೇಳಲಿ. ಅದು ಬಿಟ್ಟು ಒಂದು ರಾಜಕೀಯ ಪಕ್ಷದ ಹೆಸರು ಹೇಳುವುದು ಸರಿಯಲ್ಲ. ಎರಡೂ ಗುಂಪುಗಳಲ್ಲಿ ಸುಮಾರು ಎರಡು ಮೂರು ಸಾವಿರ ಜನ ಇದ್ದರೆಂದು ಇದೆ......

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಒಂದು ನಿಮಿಷ ಕೇಳಿ ಇಲ್ಲಿ, ಯಾರೋಒಬ್ಬಿಬ್ಬರು ಇರಬಹುದು, ಇಲ್ಲಿ ಇರುವುದು ಇಡೀ ಒಂದು ಪಕ್ಷದ ವಿಚಾರವಲ್ಲ. ಹೆಸರುಗಳು ಗೊತ್ತಿದ್ದರೆ ಸ್ಪಷ್ಟವಾಗಿ ಮಾನ್ಯ ಸದಸ್ಯರು ಹೇಳಬೇಕು. ಇದರಿಂದ ವಿಚಾರಣೆಗೆ ಅನುಕೂಲವಾಗುತ್ತದೆ. ನಾನು ಹೇಳಿದ್ದುದು ಅಷ್ಟೇ. ಒಂದು ಪಕ್ಷದ ಮೇಲೆ ಗೂಬೆ ಕೂರಿಸತಕ್ಕಂಥಾದ್ದು ಅಲ್ಲ. ಯಾರೋ ಒಬ್ಬಿಬ್ಬರು ಇದ್ದರೂ ಇರಬಹುದು ಅವರ ಹೆಸರು ಹೇಳಿದರೆ ವಿಚಾರಣೆಗೆ ಅನುಕೂಲವಾಗುತ್ತದೆ.

ಶ್ರೀ ಆರ್. ವೆಂಕಟರಾಮಯ್ಯ.—ಈ ರೀತಿ ಆಗಬಾರದು, ಇದು ಇವತ್ತು ವ್ಯಾಪಕವಾಗಿ ಹಬ್ಬುತ್ತಿದೆ. ಇದನ್ನು ನಿಲ್ಲಿಸಬೇಕು. ನನ್ನದೊಂದು ರಿಕ್ವೆಸ್ಟ್ ಏನೆಂದರೆ ಯಾವುದೇ ಪಕ್ಷವಾಗಿರಲಿ ಕಾಂಗ್ರೆಸ್ ಪಕ್ಷವಾಗಿರಲಿ, ಜನತಾಪಕ್ಷವಾಗಿರಲಿ, ಕಮ್ಯುನಿಸ್ಟ್ ಪಕ್ಷವಾಗಿರಲಿ, ಈ ರೀತಿ ಮಾಡಬಾರದೆಂದು ಆ ಪಕ್ಷದ ನಾಯಕರುಗಳು ಹೇಳಬೇಕು. ನಿಜವಾಗಿಯೂ ಇದು ನಮಗೆಲ್ಲರಿಗೂ ಅವಮಾನ. ಇಂಥಾದ್ದನ್ನು ತಡೆ ಹಿಡಿಯಬೇಕು. Irrespective of the Political parties we should appeal to them. ಮಾನ್ಯ ಬೊಮ್ಮಾಯಿಯವರು ಎಲ್ಲಾ ಪಕ್ಷದ ನಾಯಕರುಗಳನ್ನು ಕರೆದುಕೊಂಡು ಹೋಗಿ ಜಿಲ್ಲೆಯಲ್ಲಿ ಎಲ್ಲಾ ಕಡೆ ಸುತ್ತಾಡಿಸಿಕೊಂಡು ಈ ರೀತಿ ಮಾಡಬಾರದೆಂದು ತಿಳಿ ಹೇಳಿದರೆ ಅನುಕೂಲವಾಗುತ್ತದೆಂದು ನಾನು ಕೇಳಿಕೊಳ್ಳುತ್ತೇನೆ.

†ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ ಮಾನ್ಯ ಶ್ರೀ ವೆಂಕಟರಾಮಯ್ಯನವರು ಪಾರ್ಟಿ ಬಗ್ಗೆ ಮಾತನಾಡಿದ್ದಾರೆ. ಅದು ಸರಿಯಲ್ಲವೆಂದು ನಾನು ಹೇಳುತ್ತೇನೆ. ಪಾರ್ಟಿ ಬಗ್ಗೆ ಇವರು ಆ ರೀತಿ ಮಾತನಾಡಬಾರದಿತ್ತು. ಈ ಘಟನೆ ಬಗ್ಗೆ ಸರ್ಕಾರದ ಗಮನ ಸೆಳೆಯಲು ನಾವು ಅವರ ಹೆಸರನ್ನು ಸಹ ತೆಗೆದುಕೊಂಡಿದ್ದೇವೆ. ನಾವು ಅವರ ಜೊತೆ ಸೇರಿ ಸಹಿ ಮಾಡಿ ಕೊಟ್ಟಿದ್ದೇವೆ. ಈ ಘಟನೆ ಬಗ್ಗೆ ನಾವು ನಿಮ್ಮೊಡನೆ ಇದ್ದೇವೆಂದು ನಿಮ್ಮ ರುಜು ತೆಗೆದುಕೊಂಡಿದ್ದು......

ಶ್ರೀ ಆರ್. ವೆಂಕಟರಾಮಯ್ಯ.—ತಪ್ಪೇನೂ ಇಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಈ ಗಮನ ಸೆಳೆಯುವ ಸೂಚನೆಗೆ ನಿಮ್ಮ ರುಜು ತೆಗೆದುಕೊಂಡಿದ್ದುದು ಏತಕ್ಕೆಂದರೆ ನಾವು ಸಹ ನಿಮ್ಮ ಜೊತೆ ಇದ್ದೇವೆಂದು ವಿಶಾಲ ದೃಷ್ಟಿಯಿಂದ ಇದನ್ನು ಮಾಡಿದ್ದೇವೆ. ಆದರೆ ತಾವು ಇಲ್ಲಿ ಒಂದು ಪಕ್ಷದ ಹೆಸರು ಹೇಳಿದ್ದುದು ಸರಿಯಲ್ಲವೆಂದು ನಾನು ಬಹಳ ಸ್ಪಷ್ಟವಾಗಿ ಹೇಳಬಯಸುತ್ತೇನೆ. ಮಾನ್ಯ ಅಧ್ಯಕ್ಷರೇ ಈಗ ಪೋಲೀಸಿನವರ ವಿಚಾರದಲ್ಲಿ ಈ ಸದನದಲ್ಲಿ

ಬರತಕ್ಕಂಥ ವಿಷಯಗಳನ್ನು ನೋಡಿದರೆ ನನಗಂತೂ ಗಾಬರಿಯಾಗುತ್ತದೆ. ಯಾವ ಹಿನ್ನೆಲೆಯಲ್ಲಿ ಎಂದರೆ ಹಿಂದೆ ಈ ಸಿಟಿಯಲ್ಲಿ ದರೋಡೆಗಳಾಗುತ್ತಿದ್ದವು. ಪ್ರತಿ ದಿವಸ ದರೋಡೆಗಳು. ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ದಕ್ಷಿಣ ತಾಲ್ಲೂಕು ಮತ್ತು ಸಿಟಿ ಪ್ರದೇಶಗಳಲ್ಲಿ ಸಹ ದರೋಡೆಗಳು ಆಗುತ್ತಿದ್ದವು. ಇದರಿಂದ ಪುಂಡರ ಹಾವಳಿಯಿಂದ ಆಗುತ್ತದೆಯೋ ಅಥವಾ ಪೋಕರಿಗಳ ಹಾವಳಿಯಿಂದ ಆಗುತ್ತದೆಯೋ ಎಂದು ಇದರ ಒಳ ಹೊಕ್ಕಿ ನೋಡಿದರೆ ಇದರ ಹಿನ್ನೆಲೆಯಲ್ಲಿ ಪೋಲೀಸಿನವರು ಇದ್ದರು. ಸರಿಯಾಗಿ ಕರ್ತವ್ಯ ಮಾಡದೇ ಇರುವ ಪೋಲೀಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಬೇಕೆಂದು ನಾನು ಅನೇಕ ಸಾರಿ ಈ ಸದನದಲ್ಲಿ ಹೇಳಿದ್ದೇನೆ. ನಾವು ಸಮಗ್ರವಾಗಿ ನೋಡಿದಾಗ ಇಂಥ ಘಟನೆಗಳು ಸಾರ್ವತ್ರಿಕವಾಗಿ ಕಾಣಬರುತ್ತಿವೆ. ನಾನು ವೈಯಕ್ತಿಕವಾಗಿ ಯಾರ ಮೇಲೂ ಹೇಳುತ್ತಿಲ್ಲ. ಯಾರು ಪೋಲೀಸ್ ಇಲಾಖೆಯ ಹೊಣೆಯನ್ನು ಹೊತ್ತಿದ್ದಾರೋ ಆ ಡೈರೆಕ್ಟರ್ ಜನರಲ್ ಆಫ್ ಪೋಲೀಸ್‌ರವರ ಕೈಯಲ್ಲಿ ಈ ಪೋಲೀಸ್ ಇಲಾಖೆಯನ್ನು ನಿರ್ವಹಣೆ ಮಾಡತಕ್ಕಂಥದ್ದು ಆಗುವುದಿಲ್ಲವೆಂದು ನನಗೆ ಮನವರಿಕೆಯಾಗಿದೆ. ಇದರ ಬಗ್ಗೆ ತಾವು ದಯವಿಟ್ಟು ಯೋಚನೆ ಮಾಡಿ, ನನಗೆ ಅವರ ಮೇಲೆ ವೈಯಕ್ತಿಕ ದ್ವೇಷ ಇಲ್ಲ. ಈ ಡೈರೆಕ್ಟರ್ ಜನರಲ್ ಆಫ್ ಪೋಲೀಸ್ ಅವರು ಅಧಿಕಾರಕ್ಕೆ ಬಂದಾಗಿನಿಂದ ಇವತ್ತಿನವರೆಗೂ ಗಲಭೆಗಳು ಆಗುತ್ತಲೇ ಇವೆ. ಅವರು ಯಾವುದೇ ಜನಾಂಗಕ್ಕೆ ಸೇರಿರಲಿ ನಿಷ್ಪಕ್ಷಪಾತವಾಗಿ ಮತ್ತು ಎಫಿಶಿಯಂಟ್ ಆಗಿ ಕೆಲಸ ಮಾಡದೇ ಇದ್ದರೆ ಅವರನ್ನು ಬದಲಾವಣೆ ಮಾಡತಕ್ಕಂಥದ್ದು ಅಥವಾ ವರ್ಗಾವಣೆ ಮಾಡುವುದು ಅನಿವಾರ್ಯವೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಈ ಘಟನೆ ಸಂದರ್ಭದಲ್ಲಿ ಎಂ. ಎಲ್. ಎ. ಗಳು ಒಂದು ಸಾರ್ವತ್ರಿಕ ಹಿತದೃಷ್ಟಿ ಇಟ್ಟುಕೊಂಡು ಒಂದು ಒಳ್ಳೆಯ ಉದ್ದೇಶಕ್ಕೆ ಹೋದಾಗ ಕೆಲವು ಜನ ಏನು ಇದ್ದಾರೆ. ಅವರುಗಳು ಮಧ್ಯದಲ್ಲೇ ಅಟ್ಯಾಕ್ ಮಾಡಿ ಎಂ. ಎಲ್. ಎ. ಗಳನ್ನು ತಡೆದು ಹೊಡೆಯುತಕ್ಕಂಥ ಸಾಹಸಕ್ಕೆ ಹೋಗಿದ್ದಾರೆ. ಪೋಲೀಸಿನವರು ಆ ಊರಿನಲ್ಲಿ ಇರಲಿಲ್ಲವೋ ? ಎಂ. ಎಲ್. ಎ. ಗಳು ಅಲ್ಲಿಗೆ ಹೋಗುತ್ತಾರೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಇಂತಿಂಥ ಎಂ. ಎಲ್. ಎ. ಗಳು ಹೋಗುತ್ತಾರೆಂದೂ ಸಹ ಪ್ರಕಟವಾಗಿತ್ತು. ಇಲ್ಲಿ ಪೋಲೀಸರ ಕರ್ತವ್ಯ ಏನಿತ್ತು ಎನ್ನುವುದೇ ನನ್ನ ಪ್ರಶ್ನೆ. ದಾರಿಗಳಲ್ಲಿ ಅಟ್ಯಾಕ್ ಮಾಡುವ ಪುಂಡರ ಸುಳಿವು ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟ್‌ರವರಿಗೆ ಬರುವುದಿಲ್ಲವೆ ? ಪೋಲೀಸ್ ಇಲಾಖೆಯವರು ಮೊದಲೇ ಜವಾಬ್ದಾರಿಯಿಂದ ಸುಳಿವು ಪಡೆದುಕೊಂಡು ಜಾಗ್ರತರಾಗಿದ್ದಿದ್ದರೆ ಇಂಥ ಘಟನೆ ಆಗುತ್ತಿರಲಿಲ್ಲ. ಯಾರು ಯಾರಿಗೆ ಹೊಡೆದಿದ್ದಾರೋ ಗೊತ್ತಿಲ್ಲ. ಈ ಘಟನೆಗೆ ಪೋಲೀಸ್ ಇಲಾಖೆ ನೇರವಾಗಿ ಜವಾಬ್ದಾರಿಯಾಗುತ್ತದೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇವತ್ತಿನ ದಿವಸ ಈ ಸದನದ ಮಾನ್ಯ ಸದಸ್ಯರುಗಳಿಗೆ ಹೊಡೆದಿದ್ದಾರೆ. ನಾನೇ ಅದನ್ನು ಕಣ್ಣಿಂದ ನೋಡಿಕೊಂಡು ಬಂದಿದ್ದೇನೆ. ಅಕಸ್ಮಾತ್ ಮಾನ್ಯ ಸದಸ್ಯರಾದ ರಮೇಶ್‌ಕುಮಾರ್‌ರವರಿಗೆ ಈಗ ಬಿದ್ದಿರುವುದಕ್ಕಿಂತ ಬಲವಾಗಿ ಏಟು ಬಿದ್ದಿದ್ದರೆ ಅವರು ಅಲ್ಲೇ ಇಲ್ಲವಾಗುತ್ತಿದ್ದರು, ಪ್ರಾಣವೇ ಹೋಗುತ್ತಿತ್ತೋ ? ಕುತ್ತಿಗೆಯ ಹಿಂದೆ ಆ ಏಟು ಬಿದ್ದಿದ್ದರೆ ಬಹಳ ಅಪಾಯವಾಗುತ್ತಿತ್ತು. ಮಾನ್ಯ ಸದಸ್ಯರುಗಳು ಬೇಗ ಆರೋಗ್ಯವಂತರಾಗಲಿ ಹಾಗೂ ಅವರು ಬೇಗ ವಾಸಿಯಾಗಲಿ ಎಂದು ನಾವು ಹಾರೈಸೋಣ. ಈ ಸಂದರ್ಭದಲ್ಲಿ ಯಾರು ಯಾರು ತಪ್ಪು ಮಾಡಿದ್ದಾರೋ ಯಾರು ಯಾರು ಹೊಡೆದಿದ್ದಾರೋ ಅವರುಗಳ ಮೇಲೆ ತೀವ್ರವಾಗಿರತಕ್ಕ ಕ್ರಮಗಳನ್ನು ತೆಗೆದುಕೊಳ್ಳಬೇಕು. ಶಿಡ್ಲಘಟ್ಟದಲ್ಲಿ ಪರಿಸ್ಥಿತಿ ವಿಕೋಪಕ್ಕೆ ಹೋಗಿದೆ. ಏಕೆ ಹೋಯಿತು ? ಪೋಲೀಸ್ ಅಧಿಕಾರಿಗಳಿಗೆ ಈ ಪರಿಸ್ಥಿತಿಯನ್ನು ಹತೋಟಿಗೆ ತರುವುದಕ್ಕೆ ಆಗುವುದಿಲ್ಲವೆ ? ಹತೋಟಿಗೆ ತರುವುದಕ್ಕಾಗುವುದಿಲ್ಲ ಎಂದರೆ ಹೇಗೆ ? ನಾನೂ ಸಹ ಪೋಲೀಸ್ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ ಮಾನ್ಯ ಬಿ. ಡಿ. ಜತ್ತಿಯವರ ಸಂಪುಟದಲ್ಲಿ ನಾನು ಡೆಪ್ಯೂಟಿ ಹೋಮ್ ಮಿನಿಸ್ಟರ್ ಆಗಿದ್ದೆ. ನನ್ನ ಕಾಲದಲ್ಲಿ ಇಂಥ ಘಟನೆಗಳು ಆಗಿದ್ದುದು ನನಗೆ ಗೊತ್ತಿಲ್ಲ, ನಾನೇನು ಎಫಿಸಿಯಂಟ್ ಎಂದು ಹೇಳುತ್ತಿಲ್ಲ. ನಮ್ಮ ಉದ್ದೇಶ ಏನು ಇದೆ ಅದು ಸದುದ್ದೇಶವಾಗಿರಬೇಕು, ಪವಿತ್ರವಾದ ಉದ್ದೇಶವಾಗಿರಬೇಕು. ಈಗ ಅಧಿಕಾರಿಗಳಿಗೆ ಕೆಲಸ ಮಾಡತಕ್ಕಂಥ ಯೋಗ್ಯತೆ ಇಲ್ಲವೆಂದ. ಹೇಳಲೇ ? ಶಕ್ತಿ ಇಲ್ಲವೆಂದು ಹೇಳಲೇ ? ದಕ್ಷತೆ ಇಲ್ಲವೆಂದು ಹೇಳಲೇ ? ಗುರಿ ಸಾಧನೆಯ ಮನೋಭಾವ ಇಲ್ಲವೆಂದು ಹೇಳಲೇ ? ಇವೆಲ್ಲಾ ಇರಬೇಕು. ಇಲ್ಲದಿದ್ದರೆ ನೀವು ರಾಜ್ಯಭಾರ ಮಾಡುವುದಕ್ಕಾಗುವುದಿಲ್ಲ.

ಇಲ್ಲದೇ ಹೋದರೆ ನೀವು ರಾಜ್ಯಭಾರವನ್ನು ಮಾಡುವುದಕ್ಕೆ ಆಗುವುದಿಲ್ಲ, ಈ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತಾ ಇದ್ದೇನೆ. ನಾವು ಸುಮ್ಮನೆ ಪ್ರಶ್ನೆ ಕೇಳಿಕೊಂಡು ಹೋಗುತ್ತಿರುತ್ತೇವೆ, ನೀವು ಅದಕ್ಕೆ ಏನೋ ಒಂದು ಉತ್ತರವನ್ನು ಕೊಟ್ಟುಕೊಂಡು ಹೋಗುತ್ತಾ ಇರುವುದೇ ಅದನ್ನೆ ಮುಂದುವರಿಸಿಕೊಂಡು ನೀವು ಹೋಗುವುದಾದರೆ ಹೋಗಿ, ನಾವು ಬೇಡ ಎನ್ನುವುದಿಲ್ಲ, ಹಾಗೆಂದರೆ, ತಮಗೆ ತಾವೇ ಉತ್ತರವನ್ನು ಕೊಟ್ಟುಕೊಂಡು ಹೋಗಬೇಕಾಗುತ್ತದೆ. ಇವೊತ್ತು ರಾಜ್ಯದಲ್ಲಿ ಪೋಲೀಸ್ ಅಧಿಕಾರಿಗಳು ಬಹಳ ಬೇಜವಾಬ್ದಾರಿಯಿಂದ ಕೆಲಸ ಮಾಡಿಕೊಂಡು ಹೋಗುತ್ತಾ ಇದ್ದಾರೆ. ಅವರ ಮೇಲೆ ನೀವು ಎಲ್ಲಾ ತರಹದ ಹತೋಟಿಯನ್ನು ಇಟ್ಟುಕೊಳ್ಳಬೇಕು: ಗೃಹಮಂತ್ರಿಯಾಗಿದ್ದ ಮಾನ್ಯ ಜಾಲಪ್ಪನವರು ರಾಜೀನಾಮೆಯನ್ನು ಕೊಟ್ಟರು. ರಾಜ್ಯದ ಇತಿಹಾಸದಲ್ಲಿ ಮೊದಲು ಒಬ್ಬರು ಮಾತ್ರ ಪೋಲೀಸ್ ಮಂತ್ರಿಗಳು ರಾಜಿನಾಮೆಯನ್ನು ಕೊಟ್ಟಿದ್ದರು. ಅವರು ಮಾನ್ಯ ರಾಮರಾಯರು, ಅದೂ ಒಂದು ಸಣ್ಣ ದೂರಿಗೋಸ್ಕರವಾಗಿ ಅವರು ರಾಜಿನಾಮೆ ಕೊಟ್ಟಿದ್ದರು.

ಅಧ್ಯಕ್ಷರು.—ತಾವು ವಿಷಯದ ಬಗ್ಗೆ ಮಾತನಾಡಿ...

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಜಾಲಪ್ಪನವರು ರಾಜೀನಾಮೆ ಕೊಡುವಂತಹ ಪರಿಸ್ಥಿತಿಯನ್ನು ತಂದಿದ್ದಾರೆ. ಈ ಪರಿಸ್ಥಿತಿಯನ್ನು ಯಾರು ಏಕೆ ತಂದರು ? ಜಾಲಪ್ಪನವರು ಏನು ಮಾಡಿದ್ದಾರೋ, ಬಿಟ್ಟಿದ್ದಾರೋ ಅದು ನನಗೆ ಗೊತ್ತಿಲ್ಲ. ಅದು ನನಗೆ ಬೇಕಾಗಿಯೂ ಇಲ್ಲ. ಒಟ್ಟಿನಲ್ಲಿ ಪೋಲೀಸ್ ಅಧಿಕಾರಿಗಳನ್ನು ನೀವು ಸರಿಯಾಗಿ ಹತೋಟಿಯಲ್ಲಿಟ್ಟುಕೊಂಡು ಅವರಿಂದ ಕೆಲಸವನ್ನು ಮಾಡಿಸಿಕೊಳ್ಳಬೇಕು. ಅವರು ತಪ್ಪಿತಸ್ಥರು ಎಂದು ಕಂಡು ಬಂದರೆ ಅವರ ಮೇಲೆ ಸೂಕ್ತ ಕ್ರಮವನ್ನು ಕೂಡ ತೆಗೆದುಕೊಳ್ಳಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಮುನಿಸ್ವಾಮಪ್ಪ.—ಅಧ್ಯಕ್ಷರೆ, ನನಗೆ ಸ್ವಲ್ಪ ಅವಕಾಶವನ್ನು ಕೊಡಿ...

ಅಧ್ಯಕ್ಷರು.—ಇಲ್ಲ. ಇದು ಕಾಲಿಂಗ್ ಅಟೆನ್‌ಶನ್... ತಮಗೆ ಅವಕಾಶ ಇಲ್ಲ.

ಶ್ರೀ ರಘುಪತಿ.—ಅಧ್ಯಕ್ಷರೇ, ಅವರು ಸ್ಥಳೀಯ ಸದಸ್ಯರು. ಅವರಿಗೆ ಸ್ವಲ್ಪ ಅವಕಾಶವನ್ನು ಕೊಡಬೇಕು. ಅವಕಾಶವನ್ನು ಕೊಡುವ ಬಗ್ಗೆ ಪರ್ಯಾಲೋಚನೆಗೆ ತಮಗೇ ಬಿಡುತ್ತೇನೆ.

ಅಧ್ಯಕ್ಷರು.—ಆಯಿತು, ಅವರಿಗೆ ಅನಂತರ ಅವಕಾಶವನ್ನು ಕೊಡೋಣ...

† ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ೪-೫ ದಿವಸಗಳಿಂದ ಮೇಲಿಂದ ಮೇಲೆ ಶಿಡ್ಲಘಟ್ಟ ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿಯೂ ಕೂಡ ಗಲಭೆಗಳು ಉಂಟಾಗಿವೆ, ಇದಕ್ಕೆ ಕಾರಣ ಕೋಮು ಗಲಭೆ ಎಂದು ಹೇಳುತ್ತಾರೆ. ಈ ಗಲಭೆಗಳಿಗೆ ಕಾರಣ ಏನು ಎನ್ನುವುದನ್ನು ಸರಕಾರದವರು ಪರಿಶೀಲನೆ ಮಾಡಿನೋಡಬೇಕು. ಮತ್ತು ಆ ಬಗ್ಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು. ಮೊನ್ನೆಯ ದಿವಸ ಈ ಗಲಭೆ ಕುರಿತು ಮಾನ್ಯ ಮುಖ್ಯಮಂತ್ರಿಯವರು ಸದನದಲ್ಲಿ ಮಾತನಾಡುತ್ತಾ, ಆ ಪ್ರದೇಶಗಳಲ್ಲಿ ಹೆಚ್ಚಿನ ಬಂದೋಬಸ್ತಿಗೆ ಪೋಲೀಸರನ್ನು ಹೆಚ್ಚು ಸಂಖ್ಯೆಯಲ್ಲಿ ಕಳುಹಿಸುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ ಎಂದು ಹೇಳತಕ್ಕಂಥ ಸಮಯದಲ್ಲಿ ಅಲ್ಲಿಗೆ ಹೋಗುತ್ತಿದ್ದ ನಮ್ಮ ಶಾಸಕರಿಗೆ ಏಟು ಬಿತ್ತು. ಯಾರೇ ಆಗಿರಲಿ, ಇಂತಹ ಸಂದರ್ಭಗಳು ಬಂದಾಗ ಶಾಸಕರು ಆ ಸ್ಥಳಗಳಿಗೆ ಹೋಗಿ ಭೇಟಿ ಕೊಟ್ಟು ಅಲ್ಲಿಯ ಜನಗಳಿಗೆ ಸಮಾಧಾನ ಮಾಡಿ, ಧೈರ್ಯ ತುಂಬಿ, ಶಾಂತ ಪರಿಸ್ಥಿತಿಯನ್ನು ಉಂಟು ಮಾಡಲು ಪ್ರಯತ್ನ ಮಾಡುತ್ತಾರೆ. ಗಲಭೆಗಳು ಆಗದಂತೆ ನೋಡಿಕೊಳ್ಳಲು ಪ್ರಯತ್ನ ಮಾಡುತ್ತಾರೆ. ಆದರೆ ಇಂತಹ ಒಳ್ಳೆಯ ಕೆಲಸವನ್ನು ಮಾಡಲಿಕ್ಕೆ ಹೋಗುವಂತಹವರಿಗೇ ಈ ಪರಿಸ್ಥಿತಿಯು ಉಂಟಾದರೆ, ಅಂತಹ ಸ್ಥಳಗಳಿಗೆ ಹೋಗುವುದಕ್ಕೆ ಇನ್ನು ಮುಂದೆ ಯಾರಾದರೂ ಭಯ ಪಡಬೇಕಾಗುತ್ತದೆ. ಹಾಗೆ ಆಗಬಾರದು ಎಂದು ನಾನು ಬಯಸುತ್ತೇನೆ. ತಕ್ಷಣ ಇಂತಹ ಗಲಭೆಗಳು, ಅಹಿತಕರ ಘಟನೆಗಳು ನಡೆದಾಗ ಕೂಡಲೇ ಸಂಬಂಧಪಟ್ಟ ಜವಾಬ್ದಾರಿಯುತ ವ್ಯಕ್ತಿಗಳು ಹೋಗಿ ಅಲ್ಲಿಯ ಪರಿಸ್ಥಿತಿಯನ್ನು ತಹಬಂದಿಗೆ ತರುವುದಕ್ಕೆ ಬೇಕಾದಂಥ ವ್ಯವಸ್ಥೆಯನ್ನು ಮಾಡುವುದಕ್ಕೆ ಎಲ್ಲಾ ತರಹದ ಅನುಕೂಲಗಳು ಇರಬೇಕು. ಆದರೆ ನಮ್ಮಲ್ಲಿ ದುರ್ದೈವಶಾತ್ ಹಾಗೆ ಆಗಲಿಲ್ಲ, ಹೋಗತಕ್ಕಂಥ ಜನರಿಗೇ ಏಟು ಬಿದ್ದಿದೆ. ಅವರು ಸ್ವಲ್ಪದರಲ್ಲಿಯೇ ತಮ್ಮ ಪ್ರಾಣವನ್ನು ಉಳಿಸಿಕೊಂಡಿದ್ದಾರೆ. ಮಾನ್ಯ ಬಸವಲಿಂಗಪ್ಪನವರು ಹೇಳಿದ ಹಾಗೆ ಒಂದು ಏಟು ಬಲವಾಗಿ ಬಿದ್ದಿದ್ದರೆ ರಮೇಶ್‌ಕುಮಾರ್‌ರವರ ಪರಿಸ್ಥಿತಿಯು ಚಿಂತಾಜನಕವಾಗುತ್ತಿತ್ತು. ಈಗ ಅವರು ಶೀಘ್ರವಾಗಿ ಗುಣ

ಮುಖರಾಗಲಿ ಎಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ಗಲಭೆಯು ಕ್ಯಾಲಸನೂರು ಮುಂತಾದ ಹಳ್ಳಿಗಳಿಗೆ ಹಬ್ಬಿದೆ. ಹೀಗೆ ಆದರೆ ಪರಿಸ್ಥಿತಿಯು ಬಹಳ ಕಷ್ಟವಾಗುತ್ತದೆ. ಅನಂತರ ಪೋಲೀಸರಿಗೂ ಕೂಡ ತಹಬದಿಗೆ ತರುವುದಕ್ಕೆ ಆಗದ ಮಟ್ಟಕ್ಕೆ ಹೋಗುತ್ತದೆ. ಯಾವುದೇ ಗಲಭೆ ಹರಡುವುದಕ್ಕೆ ಮುಂಚೆಯೇ ಸೂಕ್ತ ಬಂದೋಬಸ್ತನ್ನು ಮಾಡಬೇಕಾಗುತ್ತದೆ. ಗಲಾಟೆ ಆದಮೇಲೆ ಫೈರಿಂಗ್ ಮಾಡುವುದು, ಲಾಠಿಚಾರ್ಜ್ ಮಾಡುವುದು, ಗ್ಯಾಸ್ ಸಿಡಿಸುವುದು ಮಾಡುವುದರಿಂದ ಏನೂ ಪ್ರಯೋಜನ ಆಗುವುದಿಲ್ಲ. ಎಲ್ಲಿಯಾದರೂ ಗಲಾಟೆ ಆಗುತ್ತಿದೆ ಎನ್ನತಕ್ಕಂಥ ನಿರೀಕ್ಷೆ ಇದ್ದಲ್ಲಿ ಅದು ಆಗದ ಹಾಗೆ ನೋಡಿಕೊಳ್ಳಬೇಕು. ಅಲ್ಲಿ ಅನೇಕ ಮನೆಗಳು ಅಂಗಡಿಗಳು ಸುಟ್ಟುಹೋಗಿವೆ. ಇವರು ಹೇಳುವ ಪ್ರಕಾರ ಕೆಲವೇ ಮನೆಗಳು ಮತ್ತು ಅಂಗಡಿಗಳಿಗೆ ಜಖಂ ಆಗಿದೆ ಎಂದು ತಿಳಿದು ಬಂದರೂ ವಾಸ್ತವವಾಗಿ ಅನೇಕ ಮನೆಗಳು ಮತ್ತು ಅಂಗಡಿಗಳು ಸುಟ್ಟು ಹೋಗಿವೆ ಎಂದು ಕಾಣುತ್ತದೆ. ಅಂತಹ ಫೋಟೋಗಳನ್ನು ಪತ್ರಿಕೆಗಳಲ್ಲಿ ಕೂಡ ನೋಡಬಹುದು. ಗುಡಿಸಲು ೧೧ ಎಂದು ಹೇಳಿದ್ದಾರೆ. ನನಗೆ ತಿಳಿದು ಬಂದ ಪ್ರಕಾರ ೩೫ ಗುಡಿಸಲುಗಳು ಸುಟ್ಟಿವೆ. ೨೫ ಸಣ್ಣಪುಟ್ಟ ಸೌದೆ ಡಿಪೋಗಳೂ ಸುಟ್ಟಿವೆ. ಇವನ್ನೆಲ್ಲಾ ನೋಡಿದರೆ ನಮ್ಮ ಜನರಿಗೆ ಏನಾಗಿದೆಯೋ ಗೊತ್ತಾಗುತ್ತಿಲ್ಲ. ವಿಶ್ವಶಾಂತಿಯನ್ನು ಬಯಸುವ ಜನ ಸಾಮಾನ್ಯ ಹಳ್ಳಿಯಲ್ಲಿ ಒಬ್ಬರಿನೊಬ್ಬರು ಘರ್ಷಣೆಯನ್ನು ಮಾಡುವ ಮೂಲಕ ಅನಾಹುತಗಳನ್ನು ಆದರಿಸುವ ಮೂಲಕ ತೊಂದರೆಗಳನ್ನು ಅನುಭವಿಸುವ ಪರಿಸ್ಥಿತಿಗೆ ಬಂದಿದ್ದೇವೆ. ಇದರ ಬಗ್ಗೆ ನಾವೆಲ್ಲರೂ ಚರ್ಚೆ ಮಾಡಬೇಕಾಗಿದೆ. ಇದರಲ್ಲಿ ಕಾಂಗ್ರೆಸ್ ಜನತಾ, ಕಮ್ಯೂನಿಸ್ಟರು ಎಂದು ನಾವೇ ಹೆಸರನ್ನು ಹೇಳಿಕೊಳ್ಳುವುದರಲ್ಲಿ ಅರ್ಥವಿಲ್ಲ. ಯಾರೇ ಇರಲಿ, ಯಾವ ಪಕ್ಷಕ್ಕೇ ಸೇರಿರಲಿ, ಅವರನ್ನು ಸರಿಯಾಗಿ ಮಟ್ಟ ಹಾಕಬೇಕಾದದ್ದು ಸರ್ಕಾರದ ಕರ್ತವ್ಯ. ಇದನ್ನು ಎಲ್ಲರೂ ಸೇರಿ ಮಾಡಬೇಕಾಗುತ್ತದೆ. ಯಾವುದೇ ಜಾತಿಯವರಾಗಿರಲಿ, ಪಂಗಡದವರಾಗಿರಲಿ ಅಂಥವರನ್ನು ಉಳಿಸುವುದಕ್ಕೆ ಹೋದರೆ ಮತ್ತೆ ಅವರು ಇಂತಹ ಪ್ರಕರಣಗಳನ್ನು ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಆಸ್ತಿಪಾಸ್ತಿಗಳಿಗೆ ಧಕ್ಕೆ ತರುತ್ತಾರೆ. ಪತ್ರಿಕೆಯಲ್ಲಿ ನೋಡಿದರೆ ಬಸ್ಸಿನಲ್ಲಿ ಹೋಗುವ ಜನಗಳನ್ನು ಇಳಿಸಿ ಡ್ರೈವರನ ಬಟ್ಟೆ ಕಳಚಿ ಓಡಿಸಿದ್ದಾರೆ. ಈ ರೀತಿ ಮಾಡುವ ದುಷ್ಟರನ್ನು ಶಿಕ್ಷೆಗೆ ಗುರಿಪಡಿಸಬೇಕು. ಯಾವುದೇ ಮುಲಾಜಿಲ್ಲದಂತೆ ಕ್ರಮ ಕೈಗೊಳ್ಳಬೇಕು. ಪೋಲೀಸ್ ಅಧಿಕಾರಿಗಳಿಗೆ ಪ್ರೋತ್ಸಾಹ ಕೊಡಬೇಕು. ಆದರೆ ಪೋಲೀಸರೂ ಕೂಡ ಒಂದೊಂದು ಸಲ ಕೊಡುವ ಪ್ರೋತ್ಸಾಹವನ್ನು ದುರುಪಯೋಗಪಡಿಸಿಕೊಂಡು ಲಾಕ್ ಅಪ್‌ನಲ್ಲಿ ಹೊಡೆಯುವುದಲ್ಲ ಕೆಲವು ಸಂದರ್ಭಗಳಲ್ಲಿ ಹೊಡೆಯಲೇಬೇಕಾದಂಥ ಸನ್ನಿವೇಶಗಳು ಬರಬಹುದು. ಆದರೆ ಹೊಡೆಯುವ ಉದ್ದೇಶವನ್ನೇ ಪೋಲೀಸರು ಇಟ್ಟುಕೊಳ್ಳುವುದು ಸರಿಯಲ್ಲ. ಅಪರಾಧಿಗಳನ್ನು ಶಿಸ್ತಿನ ಕ್ರಮಕ್ಕೆ ಒಳಪಡಿಸಿ ಅಂಥವರು ಸಾರ್ವಜನಿಕರ ಅಗೌರವಕ್ಕೆ ಪಾತ್ರವಾಗುವ ರೀತಿಯಲ್ಲಿ ಅವರ ಮೇಲೆ ಕ್ರಮ ಕೈಗೊಳ್ಳಿ ಎಂದು ಹೇಳುತ್ತಾ ಎಲ್ಲೆಲ್ಲಿ ಆಸ್ತಿಪಾಸ್ತಿಗಳು ಹಾಳಾಗಿ ಸೌದೆ ಡಿಪೋಗಳು ಸುಟ್ಟುಹೋಗಿವೆ. ಅಂಗಡಿಗಳು ಸುಟ್ಟುಹೋಗಿವೆ ಇವನ್ನೇ ಜೀವನಾಧಾರಕ್ಕೆ ನೆಚ್ಚಿಕೊಂಡಿದ್ದಂಥ ಸಾಮಾನ್ಯ ಜನರಿಗೆ ಬಹಳ ನಷ್ಟವಾಗಿದೆ. ಯಾರು ಯಾರು ತಮ್ಮ ಆಸ್ತಿಪಾಸ್ತಿ ಹಾಗೂ ಅಂಗಡಿಗಳನ್ನು ಕಳೆದುಕೊಂಡು ನಷ್ಟಕ್ಕೆ ಈಡಾಗಿದ್ದಾರೆಯೋ ಅಂಥವರಿಗೆ ಪರಿಹಾರ ಕೊಡಬೇಕಾದದ್ದು ಸರ್ಕಾರದ ಆದ್ಯಕರ್ತವ್ಯ. ಬೇರೆಲ್ಲೂ ಇಂತಹ ಘಟನೆಗಳು ಪುನಃ ನಡೆಯದಂತೆ ಮುಂಜಾಗ್ರತಾ ಕ್ರಮವನ್ನು ಅನುಸರಿಸಿ ಈಗ ನಷ್ಟಕ್ಕೀಡಾಗಿರುವವರಿಗೆ ಪರಿಹಾರ ಸಿಕ್ಕಿಸುವ ಮೂಲಕ ಸಾವಿರಾರು ಜನಗಳನ್ನು ಪ್ರಚೋದನೆಗೊಳಿಸಿ ಇಂಥ ಘಟನೆಗಳಿಗೆ ಕಾರಣವಾಗುವ ಪುಂಡಾಳುಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳುವ ಮೂಲಕ ಶಿಕ್ಷೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಮುನಿಸ್ವಾಮಪ್ಪ (ಶಿಡ್ಲಘಟ್ಟ) ---ಮಾನ್ಯ ಅಧ್ಯಕ್ಷರೇ, ಇದುವರೆಗೂ ನಮ್ಮ ಹಿರಿಯ ಸದಸ್ಯರುಗಳು ಹೇಳುತ್ತಿದ್ದರು ನಮ್ಮ ಕ್ಷೇತ್ರದಲ್ಲಿ ಪೋಲೀಸರು ಸರಿಯಾಗಿ ಕೆಲಸ ಮಾಡಿಲ್ಲವೆಂದು. ಅದು ಸುಳ್ಳು. ಏಕೆಂದರೆ ನಾನು ಅವರ ಜೊತೆಯಲ್ಲಿದ್ದೆ, ಒಂದು ಹೆಣವನ್ನು ಮಾತ್ರ ನಾವು ನೋಡಿದೆವು, ಅವರೇನಾದರೂ ಸ್ವಲ್ಪ ಬೇಜವಾಬ್ದಾರಿಯಿಂದಿದ್ದರೆ ಸಾವಿರಾರು ಹೆಣವನ್ನು ನೋಡಬೇಕಾಗುತ್ತಿತ್ತು. ಡಿ.ಐ.ಜಿ. ಸ್ಪೆಷಲ್ ಐ.ಜಿ. ಕೂಡ ಇದ್ದರು. ರಾತ್ರಿ ೧-೨ ಗಂಟೆಯವರೆಗೆ ಗಸ್ತು ಮಾಡುತ್ತಿದ್ದರು, ಇಲ್ಲದಿದ್ದರೆ ಸಾವಿರಾರು ಜನಗಳು ಬಂದು ಚರ್ಚೆ ಗಲಾಟೆ ಮಾಡುವ ಸ್ಥಿತಿಗೆ ಬಂದಿತ್ತು. ಅಕ್ಕಿನ ಗ್ರಾಮಾಂತರ ಪ್ರದೇಶಗಳಲ್ಲಿ ಸುಳ್ಳು ಸುದ್ದಿಗಳು ಹಬ್ಬಿಸಿದ್ದರು. ನಮ್ಮ ಸ್ನೇಹಿತರು ಕೇಳಬಹುದು ಪೋಲೀಸರು ಇಷ್ಟೊಂದು ಬಂದೋಬಸ್ತ್ ನೀಡಿದ್ದರೂ ಕೂಡ ಶಾಸಕರಿಗೆ ಏಕೆ ಪೆಟ್ಟಾಯಿತು. ಇದನ್ನು ಯೋಚಿಸಿ

ಮಾಡಬೇಕಾಗಿ ಬರುತ್ತದೆ. ನಾನು ಮಾನ್ಯ ವೀರಣ್ಣನವರು ಹಾಗೂ ಮೊಯಿನುದ್ದೀನ್‌ರವರು ಎಲ್ಲಾ ಶಿಡ್ಲಘಟ್ಟಕ್ಕೆ ಒಟ್ಟಾಗಿ ಹೋಗುತ್ತಿದ್ದಾಗ ಮೇಳೂರು ಸರ್ಕಲ್ ಹತ್ತಿರ ಅಟ್ಯಾಕ್ ಮಾಡಿದರು ಆಗ ನಾನು ಇಳಿದು ಸಮಾಧಾನಪಡಿಸಿ ಕೊಟ್ಟು ಮುಂದೆ ಹೋಗಿದ್ದೆ. ರಾಜಕೀಯವಾಗಿ ನನ್ನನ್ನೂ ಕೂಡ ರಾಜೀನಾಮೆ ಕೊಡಿ ಎಂದು ಕೇಳಿದರು. ಕಾಂಗ್ರೆಸ್ ಅಥವಾ ಜನತಾ ಪಕ್ಷ ಸಿ.ಪಿ.ಎಂ ಪಕ್ಷವೆಂದು ಹೇಳುವುದಿಲ್ಲ, ಹೇಳುವುದಕ್ಕೆ ನಾನು ತಯಾರಿಲ್ಲ. ನಿಮಗೆ ಇಷ್ಟವಿದ್ದರೆ ರಾಜೀನಾಮೆ ಕೊಡುತ್ತೇನೆ ಕೊಡಬಾರದೆಂದು ಏನೂ ಇಲ್ಲ. ಅವರ ಉದ್ದೇಶವೇನು ಹೇಳಿ ಎಂದು ಕೇಳಿದೆ. ಇದರ ಬಗ್ಗೆ ಅರ್ಧ ಗಂಟೆ ಚರ್ಚೆ ಮಾಡಿ ನಂತರ ವಾಪಸ್ ಕಳುಹಿಸಿದರು. ನಂತರ ರೋಷನ್ ಬೇಗ್, ಮತ್ತು ರಿಪ್ರೋರ್ ಕುಮಾರ್‌ರವರನ್ನು ಹಿಡಿದುಕೊಂಡು ಹೊಡೆದರು. ಪೋಲೀಸರು ಇಲ್ಲವೆಂದು ಅಲ್ಲ. ಇಷ್ಟು ಗಂಭೀರವಾದ ಪರಿಸ್ಥಿತಿಯಿದ್ದರೂ ಕೂಡ ಪೋಲೀಸ್ ಬಂದೋಬಸ್ತು ಏನು ಅಲ್ಲಿ ಇತ್ತು ಆ ಬಂದೋಬಸ್ತು ಸಾಲದೇ ಬಂತು. ಅವರು ವೈರ್‌ಲೆಸ್ ಕಳುಹಿಸಿ ಅವರುಗಳು ಬರುವ ಹೊತ್ತಿಗೆ ಒಂದು ಗಂಟೆ ಸಮಯವಾದರೂ ಬೇಕಾಗುತ್ತದೆ ಇಷ್ಟೊಂದು ವ್ಯತ್ಯಾಸದ ನಡುವೆ ಈ ಘಟನೆಯಾಗಿದೆ. ಹೊಡೆದವರು ಯಾರೇ ಇರಲಿ ಮಾನ್ಯ ಹಿರಿಯ ಸದಸ್ಯರು ಹೇಳಿದ ಹಾಗೆ ಅವರ ಮೇಲೆ ಕ್ರಮ ತೆಗೆದುಕೊಂಡು ಶಿಕ್ಷೆ ಕೊಡಿಸುವ ವ್ಯವಸ್ಥೆಯನ್ನು ಮಾಡಬೇಕು. ಇದನ್ನು ಎರಡೂ ಕಡೆಯ ನಾಯಕರು ಕೇಳುತ್ತಿರುವುದರಿಂದ ನಾನು ಸಂತೋಷಪಡುತ್ತೇನೆ, ಇವತ್ತೆಲ್ಲಾ ಸುಮಾರು ವರ್ಷಗಳಿಂದ ಹಿಂದೂ ಮುಸ್ಲಿಂಗಳು ಶಿಡ್ಲಘಟ್ಟದಲ್ಲಿ ಜೀವನ ಮಾಡುತ್ತಿದ್ದಾರೆ. ಅಲ್ಲಿ ರಾಜಕೀಯವಿಲ್ಲವೆಂದು ಹೇಳುತ್ತೇನೆ. ಹಿಂದೆ ಕೋಮು ಗಲಭೆಯಾದರೆ ಎರಡೂ ಕಡೆಯವರನ್ನು ಕೂಡಿಸಿ ಸಮಾಧಾನಪಡಿಸಿ ಮಾತಾಡಿ ಸಮಾಧಾನ ಪಡಿಸಿದಾಗ ಪರಿಸ್ಥಿತಿ ತಕ್ಷಣ ತಣ್ಣಗಾಗುತ್ತಿತ್ತು. ಆದರೆ ಆ ಸ್ಟೇಜಿಗೆ ಬರಲಿಲ್ಲ. ಇದು ಸುಮಾರು ೪೨ ವರ್ಷಗಳ ಸ್ಕೀಮ್. ಇವರು ಹೇಳುತ್ತಿದ್ದಾರೆ, ಇದು ಇದು ಮೂರು ತಿಂಗಳ ಯೋಜನೆ ಎಂದು. ಕಳೆದ ಚುನಾವಣೆಯಿಂದ ಈಚೆಗೆ ಇದು ಉದ್ಭವವಾಯಿತು. ಪುರಸಭಾ ಚುನಾವಣೆಯಲ್ಲಿ ನಮ್ಮ ಕಡೆ ಬಹಳಷ್ಟು ಜನ ಸದಸ್ಯರು ಗೆದ್ದಿದ್ದಾರೆ. ನಮ್ಮ ಕಡೆ ೧೧ ಜನ, ಆ ಕಡೆ ೫ ಜನ ಗೆದ್ದಿದ್ದಾರೆ. ಇಬ್ಬರು ಮುಸ್ಲಿಂ ಸದಸ್ಯರು ಇನ್ನೊಬ್ಬರು ಹರಿಜನ ಸದಸ್ಯರು ಒಬ್ಬ ಮಹಿಳಾ ಸದಸ್ಯರನ್ನು ಕರೆದುಕೊಂಡು ಹೋಗಿ ಬಷೀರ್ ಸಾಹೇಬರವರನ್ನು ಅಲ್ಲಿ ಅಧ್ಯಕ್ಷರನ್ನಾಗಿ ಮಾಡಿದರು. ನಮ್ಮ ಕಡೆ ಅವರನ್ನು ಅಧ್ಯಕ್ಷರನ್ನಾಗಿ ಮಾಡುವುದಿಲ್ಲವೆಂದು ಹೇಳಿದೆವು. ಎರಡು ವರ್ಷಗಳ ನಂತರ ಅವರ ಮೇಲೆಯೇ ನೋ ಕಾನ್‌ಫಿಡೆನ್ಸ್ ತಂದರು ನಂತರ ನಮ್ಮ ಕಡೆ ಬಂದು ನಮ್ಮ ಸದಸ್ಯರು ನೋ ಕಾನ್‌ಫಿಡೆನ್ಸ್ ಮೋಷನ್‌ಗೆ ಸೈನ್ ಹಾಕಬೇಕೆಂದು ಹೇಳಿದಾಗ, ನಾವು ಅಧ್ಯಕ್ಷರಾಗಿ ಅವರನ್ನು ಆಯ್ಕೆ ಮಾಡಿಲ್ಲ ನಾವು ಅದಕ್ಕೆ ಸಹಿ ಮಾಡಿಲ್ಲ ಎಲ್ಲಾ ಆದ ಮೇಲೆ ಕೊನೆಯಲ್ಲಿ ಹಾಕುತ್ತೇವೆಂದು ಹೇಳಿದೆವು ನಂತರ ನೀವು ಹಿಂದೂ ಜನಾಂಗದಲ್ಲಿ ಹುಟ್ಟಿದ್ದರೆ ರಾಜೀನಾಮೆ ಕೊಡಬೇಕೆಂದು ಒಂದು ವರ್ಗ ಬಂತು. ಆದರೆ ನಂತರ ಅವರು ರಾಜೀನಾಮೆ ಕೊಡುವುದಕ್ಕಾಗಲಿಲ್ಲ, ಇರುವ ವಿಚಾರವನ್ನು ನಾನು ಹೇಳಿದ್ದೇನೆ. ಇದರ ಬಗ್ಗೆ ಪರಿಶೀಲನೆ ಮಾಡಿ ಕ್ರಮವನ್ನು ಬೇಕಾದರೆ ತೆಗೆದುಕೊಳ್ಳಿ. ಕೊನೆಗೆ ಈ ಮುಸಲ್ಮಾನರುಗಳು ಅದೇ ಜನಾಂಗಕ್ಕೆ ಸಪೋರ್ಟ್ ಮಾಡುತ್ತಿದ್ದರು. ಪ್ರಾರಂಭದ ಹಂತದಲ್ಲಿ ಹಿಂದೂ ಮುಸ್ಲಿಂಗಳಲ್ಲಿ ಕೋಮು ಗಲಭೆ ಏನು ಇತ್ತು ಅದನ್ನು ಗಮನಕ್ಕೆ ತೆಗೆದುಕೊಂಡಿರಲಿಲ್ಲ ಆದರೆ ಅವರಲ್ಲೇ ವೈಮನಸ್ಯ ಉಂಟಾಗಿ ಪರಿಸ್ಥಿತಿ ವಿಕೋಪಕ್ಕೆ ಹೋದ ಮೇಲೆ ಈ ಘಟನೆ ನಡೆಯಿತು. ಎರಡು ವರ್ಷಗಳ ಹಿಂದೆ ಇಂತಹ ಘಟನೆಯಾಗಿತ್ತು ಆಗ ಮುನಿಯಪ್ಪನವರು ಮಂತ್ರಿಗಳಾಗಿದ್ದರು. ಮೊಯಿನುದ್ದೀನ್‌ರವರು ಕೂಡ ಬಂದಿದ್ದರು ಅಲ್ಲಿ ಶಾಂತಿ ಸಭೆ ಮಾಡಿದರು ಅದಕ್ಕೆ ಮೊದಲು ಕೂಡ ಶಾಂತಿ ಸಭೆಗಳನ್ನು ಮಾಡುತ್ತಿದ್ದರು. ಆದರೆ ಸ್ಥಳೀಯ ಶಾಸಕನಾದ ನನ್ನನ್ನು ಸದಸ್ಯನನ್ನಾಗಿ ಮಾಡಲಿಲ್ಲ. ಪುರಸಭೆ ಮಾಜಿ ಅಂತರವಾಗಿ ಆಯ್ಕೆಯಾದವನಲ್ಲ ಅವನು ಹಳ್ಳಿಯವನು, ಈ ಪುರದಲ್ಲಿ ಅವನು ಸದಸ್ಯನಾಗಬಾರದು ಎಂಬ ತೀರ್ಮಾನಕ್ಕೆ ಅವರು ಬಂದಿದ್ದರು.

೧೧-೦೦ ಎ. ಎಂ.

ನನಗೆ ಅದು ಬೇಕಾಗಿಲ್ಲ, ಸದಸ್ಯರಾಗಳಾದರೆ ಸ್ವರ್ಗಕ್ಕೇನೂ ಹೋಗುವುದಿಲ್ಲ, ಸಧ್ಯಕ್ಕೆ ನಮ್ಮೂರು ಸಮಾಧಾನವಾಗಿರಬೇಕು ಎಂದು ಹೇಳಿ ಅವರನ್ನು ಸಮಾಧಾನಪಡಿಸಿದೆ. ಅಂದಿನ ಶಾಂತಿ ಸಮಿತಿ ಸದಸ್ಯರ ಪಟ್ಟಿ ತರಿಸಿ ನೋಡಿದರೆ ಅಪ್ರೊಕ್ಷಿನ ಕಾರ್ಯಕ್ರಮಗಳ ಪಟ್ಟಿಯನ್ನು ತರಿಸಿ ಪರಿಶೀಲನೆ ಮಾಡಿ ನೋಡಿದರೆ ಕಾಣುತ್ತದೆ. ಕೊನೆಗೆ ಏನಾಯಿತು ಎಂದರೆ ಇದು ಅವರ ಕಂಟೆ ಫೀಲ್‌ಗೆ ಬಂದರೆ

ಹೋದಮೇಲೆ ಮತ್ತೆ ಶಾಸನಸಭಾ ಸದಸ್ಯರು ಶಾಸಕರು ಏನು ಮಾಡುತ್ತಿದ್ದಾರೆ ಎಂದು ಟೌನ್‌ನಲ್ಲಿ ಪ್ರಚಾರಕ್ಕೆ ಹೊರಟರು. ಶಾಸನ ಸಭಾ ಸದಸ್ಯರಾಗಿದ್ದಾರಲ್ಲಾ ಅವರು ಏನು ಮಾಡುತ್ತಿದ್ದಾರೆ. ಹೇಗೆ ಅವರು ಸನ್ನಿವೇಶ ಕೊಟ್ಟರು, ಇದೆಲ್ಲಾ ಬಂದಿದ್ದು ಅಷ್ಟೊತ್ತಿನ ದಿವಸ. ಆಗ ಒಂದು ತಿಂಗಳ ಕಾಲ ಆ ಪುರದಲ್ಲಿ ಓಡಾಡಿ ಗಲ್ಲಿಗಳು ಬೀದಿಗಳಲ್ಲಿ ಓಡಾಡಿ ಸಭೆಗಳನ್ನು ನಡೆಸಿ ಸಮಾಧಾನದ ರೀತಿಯಲ್ಲಿ ಒಂದು ಸುವ್ಯವಸ್ಥಿತವಾದ ರೀತಿಯಲ್ಲಿ ಪರಿಸ್ಥಿತಿಯನ್ನು ಹತೋಟಿಗೆ ತಂದಿದ್ದೆವು. ನಾಲ್ಕೈದು ಮೀಟಿಂಗ್‌ಗಳನ್ನು ಮಾಡಿ ಮತ್ತೆ ಭಾನುವಾರದ ದಿವಸವೂ ಮತ್ತೊಂದು ಸಭೆಯನ್ನು ಕರೆದು ಏನು ಒಂದು ತೀರ್ಮಾನಕ್ಕೆ ಬಂದಮೇಲೆ ಶಾಂತಿ ಕಾಪಾಡಲು ಮತ್ತು ಅಲ್ಲಿ ಸುವ್ಯವಸ್ಥೆ ಬಂದಮೇಲೆ ಆಗ ಎಲ್ಲರಿಗೂ ಗೊತ್ತಾಯಿತು. ಆವತ್ತಿನ ದಿವಸ ಎಲ್ಲರಿಗೂ ಗೊತ್ತಾಗಿ ಅವರು ಒಪ್ಪಿದರು. ಇವರೂ ಒಪ್ಪಿದರು. ಅವರ ಕಾರ್ಯಕ್ರಮಗಳಿಗೆ ಮತ್ತು ಅವರ ಹಬ್ಬಗಳಿಗೆ ನೀವು ಸೇರಬೇಕು. ಮತ್ತು ನಿಮ್ಮ ಹಬ್ಬಗಳಿಗೆ ಮತ್ತು ಕಾರ್ಯಕ್ರಮಗಳಿಗೆ ಅವರು ಸೇರಬೇಕು ಎಂದು ಒಂದು ತೀರ್ಮಾನಕ್ಕೆ ಬಂದಾದಮೇಲೆ ಭಾನುವಾರ ದಿವಸ ಸಭೆಸೇರಿದ ದಿವಸ ಯಾರೋ ದುಷ್ಕರ್ಮಿಗಳು ಬಂದು ಹೆಚ್ಚಿನ ರೀತಿಯಲ್ಲಿ ಕೆಟ್ಟ ಕೆಟ್ಟ ಭಾಷೆಗಳಲ್ಲಿ ಮಾತನಾಡಿದರು. ಆದರೂ ಕೂಡಾ ನಾನು ಹೇಳಿದೆ, ನಾನು ಸಮಾಧಾನಕ್ಕಾಗಿ ನಿಮ್ಮನ್ನು ಶಾಂತಿ ಕೂಡಾ ಪಡಿಸುವುದಕ್ಕಾಗಿ ನಾನು ಹೇಳುತ್ತಿದ್ದೇನೆ, ನಿಮಗೆ ಇಷ್ಟವಾಗಲಿಲ್ಲ ಎಂದು ಹೇಳಿದರೆ ಏನೂ ಮಾಡುವುದಕ್ಕಾಗುವುದಿಲ್ಲ, ಬೇಕಾದರೆ ಇದನ್ನು ಸರ್ಕಾರಕ್ಕೆ ತಿಳಿಸುತ್ತೇನೆ ಎಂದು ಹೇಳಿ ಎದ್ದು ಬಂದೆ. ಆ ರೀತಿ ಎದ್ದು ಬಂದಮೇಲೆ ಘರ್ಷಣೆ ಪ್ರಾರಂಭವಾಯಿತು. ಘರ್ಷಣೆ ಪ್ರಾರಂಭವಾಗಿ ಅದು ವಿಕೋಪಕ್ಕೆ ಹೋಯಿತು. ಇದರ ಬಗ್ಗೆ ಹೆಚ್ಚಿನ ಚರಿತ್ರೆಯನ್ನು ನಾನು ಹೇಳಬೇಕಾಗಿಲ್ಲ. ಎಲ್ಲರೂ ಪೇಪರ್‌ಗಳಲ್ಲಿ ಓದಿದ್ದೀರಿ. ಪೇಪರ್‌ನಲ್ಲಿ ಬಾರದೇ ಇರತಕ್ಕಂಥ ವಿಚಾರಗಳು ಬೇಕಾದಷ್ಟು ಇದೆ. ಅಲ್ಲಿ ಪರಿಶೀಲನೆ ಮಾಡಿ ನೋಡಿದರೆ ಗೊತ್ತಾಗುತ್ತದೆ, ಇಷ್ಟೆಲ್ಲಾ ನಡೆಯುತ್ತಿದ್ದಾಗ ಇದರಲ್ಲಿ ರಾಜಕೀಯ ಎಷ್ಟರಮಟ್ಟಿಗೆ ಇರಬಹುದು ಎಂದು ಹೇಳುವುದಕ್ಕೆ ನಾನು ತಯಾರು ಇಲ್ಲ. ಮತ್ತು ಮೇಲೂರು ಮತ್ತು ಬೇಲೂರು ಗ್ರಾಮದ ಹತ್ತಿರ ಯಾವ ಶಾಸಕರನ್ನು ಹೊಡೆದರು, ಅದು ಕೋಮು ಗಲಭೆಯಿಂದ ಅಲ್ಲ. ಅಷ್ಟರಮಟ್ಟಿಗೆ ಮಾತ್ರ ಹೇಳುತ್ತೇನೆ. ಬೇಕಾದರೆ ಪರೀಕ್ಷೆ ಮಾಡಿ ಪರಿಶೀಲನೆ ಮಾಡಿ. ಪೋಲೀಸರು ಇದ್ದರು, ಬೇಕಾಗಿ ಅವರನ್ನು ಹೊಡೆಯಬೇಕು ಎಂದು ಹೇಳಿ ಹೊಡೆದರು. ಅವರು ಯಾವ ಜಾತಿಗೆ ಸೇರಿದವರು, ಯಾವ ಪಕ್ಷಕ್ಕೆ ಸೇರಿದವರು ಎಂದು ಹೇಳುವುದಕ್ಕೆ ನಾನು ತಯಾರು ಇಲ್ಲ. ಅವರ ಮೇಲೆ ಸರಿಯಾದ ರೀತಿಯಲ್ಲಿ ಕ್ರಮ ಕೈಗೊಂಡು ಎರಡು ಕಡೆಯವರು ಶಾಸಕರನ್ನು ಹೊಡೆದಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಕೋಮು ಗಲಭೆಯಲ್ಲಿ ಇಷ್ಟು ವಿಕೋಪಕ್ಕೆ ಹೋಗಿದೆ, ಇದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿ ತಮ್ಮ ಮೂಲಕ ನಾನು ಸರ್ಕಾರವನ್ನು ಒತ್ತಾಯಪಡಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಮುನಿಸ್ವಾಮಪ್ಪನವರು ದಕ್ಷತೆಯಿಂದ ಪೋಲೀಸರು ಕೆಲಸ ಮಾಡಿದರು ಎಂದು ಹೇಳಿದರು......

ಅಧ್ಯಕ್ಷರು.—ಆಯಿತು ತಾವು ಕುಳಿತುಕೊಳ್ಳಿ. ತಾವು ಅದಕ್ಷತೆಯಿಂದ ಪೋಲೀಸರು ಕೆಲಸ ಮಾಡಿದರು ಎಂದು ಹೇಳಿದಿರಿ, ಅವರು ದಕ್ಷತೆಯಿಂದ ಕೆಲಸ ಮಾಡಿದರು ಎಂದು ಅವರ ಅಭಿಪ್ರಾಯವನ್ನು ಅವರು ಹೇಳಿದರು.

† ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಅಧ್ಯಕ್ಷರೇ, ತಾರೀಖು ೧೮-೫-೮೮ರಂದು ನನ್ನ ಜೀವಮಾನದಲ್ಲಿ ಅತ್ಯಂತ ದುಃಖದ ದಿನ. ನನ್ನ ಕ್ಷೇತ್ರದ ಕ್ಯಾಲನೂರ್ ಗ್ರಾಮದಲ್ಲಿ ಸುಮಾರು ೪ರಿಂದ ೫ ಸಾವಿರ ಜನ ಸಂಖ್ಯೆ ಇದೆ. ಅದರಲ್ಲಿ ಹಿಂದೂ ಹಾಗೂ ಮುಸ್ಲಿಮ್ ಬಂಧುಗಳು ಸರಿಸಮಾನವಾಗಿಯೇ ಇದ್ದಾರೆ. ಆ ದಿವಸ ನಾನು ಅಲ್ಲಿ ಇದ್ದಾಗ ನನ್ನ ಕೆಲವು ಮುಸ್ಲಿಮ್ ಸ್ನೇಹಿತರು ನೀವು ಹಬ್ಬಕ್ಕೆ ನಮ್ಮ ಮನೆಗೆ ಬರಬೇಕು ಮತ್ತು ಪ್ರಾರ್ಥನೆಗೂ ಸಹ ಹಾಜರು ಇರಬೇಕೆಂದು ನನ್ನನ್ನು ವಿನಂತಿಸಿಕೊಂಡಿದ್ದರು. ನಾನು ಆ ಊರಿಗೆ ಹೋದಾಗ ೧೦-೧೦-೩೦ರ ವೇಳೆ ಇರಬಹುದು ಈದ್‌ಗಾ ಹತ್ತಿರ ಮುಸ್ಲಿಮ್ ಬಂಧುಗಳು ಪ್ರಾರ್ಥನೆಗಾಗಿ ಸೇರಿದ್ದರು. ಅವರ ಪ್ರಾರ್ಥನೆ ನಂತರ ನಾನು ಸಹ ಅಲ್ಲಿಗೆ ಹೋಗಿ ಅವರಿಗೆ ಶುಭಾಶಯಗಳನ್ನು ಅರ್ಪಿಸಿ ವಾಪಸ್ ಬಂದೆ. ವಾಪಸ್ ಬರಬೇಕಾಗಿದ್ದ ಸಂದರ್ಭದಲ್ಲಿ ನನಗೆ ಒಂದು ಸುದ್ದಿ ಬಂತು. ಊರಿನ ಪೂರ್ವದ ಭಾಗದ ಒಂದು ಸ್ಥಳದಲ್ಲಿ ಸುಮಾರು ಒಂದು ಒಂದೂವರೆ ಸಾವಿರ ಹಿಂದುಗಳು ಬಂದು ಸೇರಿದ್ದಾರೆ. ಮುಸ್ಲಿಮ್ ಬಂಧುಗಳು ಪ್ರಾರ್ಥನೆ ಮುಗಿಸಿ ವಾಪಸ್ ಬರುವಾಗ ಸ್ಮಶಾನದ ಹತ್ತಿರ ಬರುವಾಗ ಅಂಥ ಸಂದರ್ಭದಲ್ಲಿ ಹಲ್ಲೆ ನಡೆಸಲು

ಸಿದ್ಧತೆಯನ್ನು ಮಾಡಿಕೊಂಡಿದ್ದಾರೆ ಎಂದು ತಿಳಿದು ಬಂತು. ನಾನು ನೇರವಾಗಿ ಅವರ ಹತ್ತಿರ ಹೋಗ ಬೇಕು ಎಂದು ನಾನು ಹೊರಟೆ. ಆದರೆ ಮಧ್ಯ ದಾರಿಯಲ್ಲಿಯೇ ಕೆಲವರು ನನ್ನ ಕಾರನ್ನು ತಡೆದರು. ನೀವು ಅಲ್ಲಿಗೆ ಹೋಗಬೇಕಾದ ಅವಶ್ಯಕತೆ ಇಲ್ಲ, ನೀವು ಮುಸ್ಲಿಮ್ ಪರವಾಗಿ ನಮ್ಮ ವಿರುದ್ಧ ಬಂದಿದ್ದು ಅದಕ್ಕಾಗಿ ನೀವು ಈ ಸ್ಥಳದಿಂದ ಹೋಗಬೇಕು ಎಂದು ತಿಳಿಸಿದರು. ನನ್ನ ಸ್ನೇಹಿತರು ಮತ್ತು ನಮ್ಮ ಪಕ್ಷದ ಕಾರ್ಯಕರ್ತರೊಬ್ಬರು, ಮೂರು ದಿನಗಳ ಹಿಂದೆ ತೀರಿ ಹೋಗಿದ್ದರು. ಅವರ ಮನೆಗೆ ನಾನು ಹೋಗ ಬೇಕಾಗಿತ್ತು. ಅವರ ಮನೆಯವರು ಸ್ಮಶಾನಕ್ಕೆ ಪೂಜಾ ವಿಧಾನಕ್ಕೆ ಹೋಗಿದ್ದಾರೆಂದು ತಿಳಿದು ಬಂತು. ನಾನು ಪಕ್ಕದ ಅಂಗಡಿಯ ಯಜಮಾನನ ಹತ್ತಿರ ಕುಳಿತು ನನ್ನ ಸ್ನೇಹಿತರ ಸಾವಿನ ಬಗ್ಗೆ ಮಾಹಿತಿಯನ್ನು ಪಡೆಯುತ್ತಿದ್ದೆ, ಅಲ್ಲಿ ಕುಳಿತಿದ್ದಾಗ ನನ್ನ ಕಾರನ್ನು ಯಾರು ತಡೆದರೋ ಅವರು ಬಂದು ಪುನಃ ಬಂದು ನಾನು ಅಲ್ಲಿಂದ ಹೋಗಬೇಕೆಂದು ಹೇಳಿದರು. ಅವರು ಯಾರು ಎಂಬು ನನಗೆ ಸ್ಪಷ್ಟವಾಗಿ ಗೊತ್ತಿದೆ, ಅವರು ಯಾವ ಉದ್ದೇಶಕ್ಕಾಗಿ ಬಂದಿದ್ದರು ಎನ್ನುವುದನ್ನು . ಹಾಗೂ ಯಾರ ಜೊತೆ ಬಂದಿದ್ದರು ಎನ್ನುವುದನ್ನು. ಆ ಮೇಲೆ ತಿಳಿಸುತ್ತೇನೆ. ನಾನು ಆ ಮುಖಂಡನನ್ನು ಒಳಗೆ ಕರೆದುಕೊಂಡು ಹೋಗಿ ಬಹಳ ಸಿಟ್ಟಿನಿಂದ ಇದ್ದ ಆತನ ಬೆನ್ನು ತಟ್ಟಿ, ಕಾಫಿ, ಬೀಡಿ ಕೊಡಿಸಿ ನನಗೆ ನೀವು ಅವರು ಎಲ್ಲರೂ ಅಣ್ಣ ತಮ್ಮಂದಿರ ತರಹ ಇದ್ದೀರಿ. ನೀವು ನನಗೆ ಎಷ್ಟು ಬೇಕೊ ಅಷ್ಟೇ ಅವರೂ ಬೇಕು. ಈ ರೀತಿ ಜಗಳ ಮಾಡಬಾರದು ಎಂದು, ಹಾಗೂ ಈ ದುರ್ಘಟನೆಗಳಿಗೆ ಅವಕಾಶ ಕೊಡುವುದು ಬೇಡ ಎಂದು ವಿದ ವಿಧವಾಗಿ ತಿಳಿಸಿದೆ. ಹಿಂದೂ ಜನ ಒಂದು ಒಂದೂವರೆ ಸಾವಿರ ಅಲ್ಲಿ ಜಮಾಯಿಸಿದ್ದರು ನಾನು ಹಿಂದೂ ಜನಗಳು. ಇದ್ದ ಕಡೆಗೆ ನಡೆದೆ ಹಲವರ ಪಂಚಾಯ್ತಿ ನನಗೆ ಇದೆ. ನಾನು ಬಿಸಿಲಿನಲ್ಲಿ ಮಾತನಾಡುವುದು ಬೇಡ, ನನಗೆ ಬಿಸಿಲಿನಲ್ಲಿ ನಿಲ್ಲುವುದಕ್ಕೆ ಆಗುವುದಿಲ್ಲ, ನೆರಳಿನಲ್ಲಿ ಹೋಗಿ ಮಾತನಾಡೋಣ ಎಂದು ವಿಧ ವಿಧವಾಗಿ ಕೇಳಿಕೊಂಡರೆ, ನನ್ನ ಉದ್ದೇಶ ಇಷ್ಟೇ ಯಾವ ರೀತಿಯಿಂದಲಾದರೂ ಈ ಘಟನೆಯನ್ನು ತಪ್ಪಿಸಲು ಅವರನ್ನು ಉಪಾಯ ಮಾಡಿ ದೂರ ಸರಿಸಬೇಕು ಎನ್ನುವುದು. ಈ ರೀತಿ ವಿಧ ವಿಧವಾಗಿ ಹೇಳಿ ಅವರನ್ನು ನೆರಳಿಗೆ ಕರೆದುಕೊಂಡು ಬಂದೆ. ನಿಮ್ಮ ಬೇಡಿಕೆ ಏನು, ಅದನ್ನು ಯಾವ ರೀತಿ ಪರಿಹರಿಸಲು ವಿಚಾರ ಮಾಡೋಣ, ಎಂದು ನಾನು ಕೇಳಿಕೊಂಡೆ ಒಂದು ೧೦ ಜನ ವಾಪಸ್ ಬಂದರು. ದೊಂಬಿ ಸ್ಥಳದಿಂದ ಬಂದ ನಂತರ ಒಬ್ಬ ಬಂದು ಗಲಾಟೆ ಶುರು ಆಯಿತು ಎಂದು ತಕ್ಷಣ ಎಲ್ಲಾ ಜನರು ಅಲ್ಲಿಗೆ ಹೋದರು. ಬೆಳಿಗ್ಗೆ ೧೧.೦೦-೩೦ ರಿಂದ ೨-೩೦ ರವರೆಗೆ ಇದು ಚರ್ಚೆ ನಡೆಯಿತು. ಬೆಳಿಗ್ಗೆಯಿಂದ ಗುಂಪು ಸೇರಿದ್ದಾರೆ ಎಂದು ಸುದ್ದಿ ಬಂದರೂ ಯಾವ ಒಬ್ಬ ಪೋಲೀಸ್ ನವರೂ ಅಲ್ಲಿಗೆ ಬರಲಿಲ್ಲ ತಿಳಿಸಿದ್ದರೂ ಬರಲಿಲ್ಲ. ಈ ರೀತಿ ಗಲಭೆ ನಡೆಯಬಹುದು, ತಕ್ಷಣ ಪೋಲೀಸರನ್ನು ಕಳುಹಿಸಬೇಕು ಎಂದು ನೂರಾರು ಬಾರಿ ಫೋನ್ ಮಾಡಿ ತಿಳಿಸಿದ್ದಾರೆ. ಫೋನ್ ಮಾಡಿ ತಿಳಿಸಿದ್ದರೂ ೨, ೨-೩೦ ಘಂಟೆ ಆದರೂ ಯಾರೂ ಬರಲಿಲ್ಲ. ನಾನು ಹೋದಾಗ ಕೇವಲ ೩ ಜನ ಪೋಲೀಸ್ ಕಾನ್‌ಸ್ಟೇಬಲ್ಸ್ ಇದ್ದರು. ೪-೫ ಸಾವಿರ ಜನಸಂಖ್ಯೆ ಇರತಕ್ಕ ಹಳ್ಳಿಗೆ ಸಾಕಷ್ಟು ಸಂಖ್ಯೆಯಲ್ಲಿ ಪೋಲೀಸರನ್ನು ಅಲ್ಲಿಗೆ ಒಬ್ಬರು ದನಕರುಗಳನ್ನು ಹಿಡಿದು ತರುತ್ತಿದ್ದಾಗ ಈ ಮೊದಲು ನನ್ನನ್ನು ತಡೆಗಟ್ಟಿದ ವ್ಯಕ್ತಿಯೇ ಆ ದನಕರುಗಳನ್ನು ತರುತ್ತಿದ್ದ ವ್ಯಕ್ತಿಯ ಬಳಿ ಹೋಗಿ, ಆತ ಹಿಡಿದು ಕೊಂಡು ಬಂದಿದ್ದ ದನಗಳ ಮೂಗು ದಾರಗಳನ್ನು ಬಿಚ್ಚಿ ಅವುಗಳನ್ನೆಲ್ಲಾ ಅಲ್ಲಿಂದ ಓಡಿಸಿದ್ದ. ಆ ದನಗಳೆಲ್ಲಾ ಮುಸ್ಲಿಂ ಬಂಧುಗಳಿಗೆ ಸೇರಿದ್ದುವು. ಈ ಘಟನೆ ನಾನು ಹೋದ ದಿವಸದ ಹಿಂದಿನ ದಿವಸ ನಡದಿದೆ ಈ ಘಟನೆಯ ನಂತರ, ಆ ಊರಿನ ಹಿಂದೂ ಮತ್ತು ಮುಸಲ್ಮಾನ್‌ರಲ್ಲಿ ಕೆಲವರು ನಾಳೆ ಹಬ್ಬವನ್ನು ಶಾಂತ ರೀತಿಯಿಂದ ಆಚರಣೆ ಮಾಡೋಣ, ಅದಕ್ಕಾಗಿ ಹೆಚ್ಚಿನ ಪೋಲೀಸ್ ಬಂದೋಬಸ್ತು ಬೇಕೆಂದು ಒಂದು ಮನವಿಯನ್ನು ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳಿಗೆ ತಿಳಿಸಿದ್ದಾರೆ. ಆದರೆ ನಾನು ಹೋದಾಗ ಅಲ್ಲಿ ೩ ಜನ ಕಾನ್‌ಸ್ಟೇಬಲ್ಸ್ ಮಾತ್ರ ಇದ್ದರು. ನಾನು ಬೆಳಿಗ್ಗೆ ೧೧-೩೦-೩೦ ಗಂಟೆಯಿಂದ ಮಧ್ಯಾಹ್ನ ಎರಡೂವರೆ ಗಂಟೆಯವರೆಗೆ ಅಲ್ಲಿದ್ದು ಅಲ್ಲಿನ ಜನರು ಗಲಾಟೆ ಮಾಡದಂತೆ ಅವರನ್ನು ಸಂತೈಸುವುದಕ್ಕೆ ಪ್ರಯತ್ನ ಮಾಡಿದೆ, ಅಷ್ಟು ಸಮಯ ಕಾದರೂ ಸಹ ಅಲ್ಲಿಗೆ ಹೆಚ್ಚಿನ ಪೋಲೀಸರು ಬರಲಿಲ್ಲ. ನಾನು ಅಲ್ಲಿಯೇ ಇದ್ದರೆ ಗಲಾಟೆ ಮಾಡುವುದಕ್ಕಾಗುವುದಿಲ್ಲವೆಂದು ಕೆಲವರು ತಿಳಿದುಕೊಂಡು ನನ್ನನ್ನು ಹೊತ್ತುಕೊಂಡು ಒಂದು ಸ್ಕೂಟರ್ ಮೇಲೆ ಹಾಕಿ ಅಲ್ಲಿಂದ ಹೋಗುತ್ತೀರೋ ಅಥವಾ ಇಲ್ಲವೋ ಎಂದು ಜಬರ್‌ದಸ್ತಿನಿಂದ ಕೇಳಿದರು. ನಂತರ ನಾನು ಪೋಲೀಸರಿಗೆ ಫೋನ್ ಮಾಡಬೇಕೆಂದು ಸುತ್ತಮುತ್ತಲಿನ ನಾಲ್ಕು ಹಳ್ಳಿಗಳಲ್ಲಿ ಪ್ರಯತ್ನ ಮಾಡಿದೆ. ಆದರೆ ಫೋನ್‌ಗಳು ಕೆಲಸ ಮಾಡದೆ ಸತ್ತಿದವು. ಪುನಃ ನಾನು ೫ನೇ ಹಳ್ಳಿಗೆ ಹೋಗಿ ಫೋನ್ ಮಾಡಿದೆ. ಎರಡೂವರೆಗಂಟೆಯ

ಮೇಲೆ ಪೋಲೀಸರು ಬಂದರು ಎಂದು ನನಗೆ ತಿಳಿಯಿತು. ಪೋಲೀಸ್ ಬರುವ ಹೊತ್ತಿಗೆ ಅವರು ಇವರ ಅಂಗಡಿಗಳಿಗೆ ಮತ್ತು ಇವರು ಅವರ ಅಂಗಡಿಗಳಿಗೆ ಬೆಂಕಿ ಇಟ್ಟಿದ್ದರು. ಅದರ ಹೊಗೆ ದೂರಕ್ಕೆ ಕಾಣುತ್ತಿತ್ತು. ಪೋಲೀಸರು ಅಲ್ಲಿಗೆ ಹೋದ ತಕ್ಷಣ ಫೈರಿಂಗ್ ಮಾಡಿದರೆಂದು ಇದರಿಂದ ಒಬ್ಬರು ಸತ್ತು ಮತ್ತೊಬ್ಬರು ಮಾರ್ಚರಿ ಹೋದರೆಂದು ನನಗೆ ಫೋನ್‌ನಲ್ಲಿ ಕೆಲವರು ತಿಳಿಸಿದರು. ಇಂತಹ ಗಲಾಟೆ ಆಗುತ್ತದೆಂದು ಅದರ ಹಿಂದಿನ ದಿನವೇ ತಿಳಿಸಿದ್ದರೂ ಸಹ ಅಲ್ಲಿಗೆ ಹೆಚ್ಚಿನ ಪೋಲೀಸರನ್ನು ಕಳಿಸಿರಲಿಲ್ಲ. ನಾನು ಹೋದಾಗ ೩ ಜನ ಕಾನ್ಸ್‌ಟೇಬಲ್ಸ್ ಮಾತ್ರ ಇದ್ದರು. ಅಲ್ಲಿನ ಕೆಲವು ಅಂಗಡಿಗಳು ಸುಟ್ಟು ಬೂದಿ ಆಗುವವರೆಗೆ ಪೋಲೀಸರು ಅಲ್ಲಿಗೆ ಹೋಗಿರಲಿಲ್ಲ. ಒಂದು ಪೋಲೀಸ್ ವ್ಯಾನನ್ನು ಅಲ್ಲಿಗೆ ತೆಗೆದುಕೊಂಡು ಹೋಗಿ ನಿಲ್ಲಿಸಿದ್ದರೆ ಇಂತಹ ಒಂದು ಘಟನೆ ಅಲ್ಲಿ ಸಂಭವಿಸುತ್ತಿರಲಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಪೋಲೀಸರು ಜಾಸ್ತಿ ಇದ್ದರೆಂದು ಶ್ರೀ ಮುನಿಶಾಮಪ್ಪನವರು ಹೇಳಿದರೆ ಇವರು ಪೋಲೀಸರೇ ಇರಲಿಲ್ಲವೆಂದು ಹೇಳುತ್ತಿದ್ದಾರೆ. ಒಂದೇ ಪಕ್ಷದ ಇಬ್ಬರು ಸದಸ್ಯರು ಬೇರೆ ಬೇರೆ ರೀತಿಯ ಹೇಳಿಕೆ ಕೊಡುತ್ತಿದ್ದಾರೆ.

ಅಧ್ಯಕ್ಷರು.—ಅವರವರ ಅಭಿಪ್ರಾಯವನ್ನು ತಿಳಿಸುತ್ತಿದ್ದಾರೆ.

ಶ್ರೀ ಎಂ. ರಘುಪತಿ —ಅವರ ತಾಲ್ಲೂಕ್ ಬೇರೆ, ಇವರ ತಾಲ್ಲೂಕ್ ಬೇರೆ ಅವರು ಶಿಡ್ಲಘಟ್ಟ ತಾಲ್ಲೂಕು ವಿಚಾರ ಹೇಳಿದರು. ಇವರು ವೇಮಗಲ್ ವಿಚಾರ ಹೇಳುತ್ತಿದ್ದಾರೆ.

ಶ್ರೀ ಸಿ. ಬೈರೇಗೌಡ.—ಸನ್ಮಾನ್ಯ ವಿರೋಧಪಕ್ಷದ ನಾಯಕ ಅವರಿಗೆ ಸಂತೋಷವಾಗುವಂತಹ ಘಟನೆ ಏನೂ ಅಲ್ಲಿ ನಡೆದಿಲ್ಲ. ಆದರೆ ಒಂದು ವಿಷಯ ಹೇಳಿದರೆ ಅವರು ದುಃಖ ಪಡುತ್ತಾರೋ ಅಥವಾ ಸಂತೋಷ ಪಡುತ್ತಾರೋ ಗೊತ್ತಿಲ್ಲ. ಅದನ್ನು ನಂತರ ಹೇಳುತ್ತೇನೆ. ಶ್ರೀ ಮುನಿಶಾಮಪ್ಪನವರು ಶಿಡ್ಲಘಟ್ಟದ ವಿಚಾರ ಹೇಳಿದರು. ನಾನು ವೇಮಗಲ್ ವಿಚಾರ ಹೇಳುತ್ತಿದ್ದೇನೆ. ಅಲ್ಲಿಗೂ ಇಲ್ಲಿಗೂ ಸುಮಾರು ೨೦ ಮೈಲಿಗಳ ಅಂತರವಿದೆ ಹೆಚ್ಚಿನ ಪೋಲೀಸರು ಶಿಡ್ಲಘಟ್ಟದಲ್ಲಿದ್ದ ಕಾರಣದಿಂದ ವೇಮಗಲ್‌ಗೆ ಅವರು ಕೂಡಲೇ ಬರಲು ಸಾಧ್ಯವಾಗಲಿಲ್ಲ ಎಂಬ ಸಂಗತಿಯನ್ನು ನಾನು ನಂತರ ತಿಳಿದುಕೊಂಡೆ. ಈ ಬಗ್ಗೆ ತಮ್ಮ ಮನಸ್ಸಿನಲ್ಲಿರುವ ಭಾವನೆ ಸರಿಯಲ್ಲವೆಂದು ನಾನಾದರೂ ಭಾವಿಸುತ್ತೇನೆ.

ಶ್ರೀ ಎಸ್. ಮುನಿಶಾಮಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕ ಅವರು ಕೇಳುತ್ತಿರುವ ಪ್ರಶ್ನೆಯನ್ನು ನಾನು ಸ್ವಾಗತ ಮಾಡುತ್ತೇನೆ. ಇಲ್ಲಿ ನಾನು ಪೋಲೀಸರನ್ನು ಶ್ಲಾಘನೆ ಮಾಡುತ್ತಿಲ್ಲ. ನಾನು ಅವರ ಜೊತೆ ಇದ್ದು ಅವರ ಕೆಲಸಕಾರ್ಯಗಳನ್ನು ನೋಡಿದ್ದೇನೆ. ಗುಂಪು ಘರ್ಷಣೆ ಆಗುವ ಸಂದರ್ಭದಲ್ಲಿ ಅವರು ಯಾರ ಅನುಮತಿಗೂ ಕಾಯದೆ ಕೂಡಲೇ ಕ್ರಮ ಕೈಕೊಳ್ಳಬಹುದಾಗಿದೆ. ಒಂದುವೇಳೆ ಅವರೇನಾದರೂ ಮೇಲಿನ ಅಧಿಕಾರಿಗಳ ಆದೇಶಕ್ಕೆ ಕಾದು ಕ್ರಮ ಕೈಕೊಳ್ಳುವುದನ್ನು ಸ್ವಲ್ಪ ತಡ ಮಾಡಿದರೂ ಸಹ ಅಲ್ಲಿ ಬಹಳಷ್ಟು ವ್ಯತ್ಯಾಸಗಳಾಗುತ್ತಿದ್ದವು. ಹೆಚ್ಚಿನ ಗಲಾಟೆ ಆಗುವುದನ್ನು ಅವರು ತಡೆಗಟ್ಟಿದ್ದಾರೆ. ಕಳೆದ ೨-೩ ತಿಂಗಳುಗಳಿಂದ ಅಲ್ಲಿ ಒಂದು ರೀತಿಯ ಕೆಟ್ಟ ವಾತಾವರಣ ಉಂಟಾಗಿತ್ತು. ಅದು ಮೊನ್ನೆ ವಿಕೋಪಕ್ಕೆ ತಿರುಗಿತು. ಮೊದಲೇ ಸುದ್ದಿ ತಿಳಿದಿದ್ದ ಪೋಲೀಸರು ಸಕಾಲದಲ್ಲಿ ಅಲ್ಲಿಗೆ ಬಂದು ಸೂಕ್ತ ಕ್ರಮ ತೆಗೆದುಕೊಂಡಿದ್ದಾರೆ. ನಾನು ಪೋಲೀಸರನ್ನು ಶ್ಲಾಘನೆ ಮಾಡಲು ಇಲ್ಲಿಗೆ ಬಂದಿಲ್ಲ. ಆದರೆ ಆ ದಿನ ಅಲ್ಲಿ ಪೋಲೀಸರು ಇಲ್ಲದಿದ್ದರೆ ನನ್ನ ತಾಲ್ಲೂಕ್‌ನಲ್ಲಿ ಏನೇನು ಆಗುತ್ತಿತ್ತೋ ಗೊತ್ತಿಲ್ಲ.

ಇವತ್ತೂ ಕೂಡ ಆ ಬಂದೋಬಸ್ತನ್ನು ವಿತ್‌ಡ್ರಾ ಮಾಡಿದ್ದಾರೆ, ಅಂದರೆ ಏನಾಗುತ್ತದೆಯೋ ಎಂಬ ಭಯ ಇವತ್ತೂ ಕೂಡ ನನಗೆ ಇದೆ. ಆದುದರಿಂದ ದಯವಿಟ್ಟು ಕ್ಷಮಿಸಬೇಕು. ಪೋಲೀಸರಂತೂ ಒಳ್ಳೆಯ ಕೆಲಸ ಮಾಡಿದ್ದಾರೆ. ಇಲ್ಲದೇ ಹೋದರೆ ಬಹಳ ತೊಂದರೆಯಾಗುತ್ತಿತ್ತು ಎಂದು ಹೇಳುತ್ತಾ ಇದ್ದೇನೆ.

ಶ್ರೀ ಸಿ. ಬೈರೇಗೌಡ.— ಅಧ್ಯಕ್ಷರೆ, ಸುಮಾರು ೪ ಗಂಟೆ ಮೇಲೆ ನಾನೂ ಸಹ ಸನ್ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ನೇರವಾಗಿ ಸಂಪರ್ಕ ಬೆಳೆಸಬೇಕು ಎಂದು ತಕ್ಷಣ ಟೆಲಿಫೋನ್ ಮಾಡಿದೆ. ಆದರೆ ದುರದೃಷ್ಟವಶಾತ್ ಅವರು ಇಲ್ಲ.

ಅಧ್ಯಕ್ಷರು.— ತಾವು ಏನು ಮಾತನಾಡುತ್ತೀರಿ, ಮೇನ್ ಪಾಯಿಂಟ್‌ಗೆ ಬನ್ನಿ.

ಶ್ರೀ ಸಿ. ಬೈರೇಗೌಡ.— ಇದು ಆವತ್ತು ನಡೆದಿರತಕ್ಕಂಥ ಘಟನೆ, ಆವತ್ತು ಅಲ್ಲಿ ಒಂದು ಪ್ರಾಣ ಹೋಗಿದೆ. ಪೋಲೀಸರು ಸಮಯಕ್ಕೆ ಸರಿಯಾಗಿ ಬಂದಿದ್ದರೆ ಈ ಘಟನೆ ನಡೆಯುತ್ತಾ ಇರಲಿಲ್ಲ, ಇದು ಆಗುತ್ತಾ ಇರಲಿಲ್ಲ ಒಂದು ಜೀವ ಹೋಗುತ್ತಾ ಇರಲಿಲ್ಲ ಲಕ್ಷಾಂತರ ರೂಪಾಯಿಗಳ ನಷ್ಟವಾಗುತ್ತಾ ಇರಲಿಲ್ಲ. ನನ್ನ ಕ್ಷೇತ್ರದಲ್ಲಿ ೧೪ ಮಂಡಲ ಪಂಚಾಯಿತಿಗಳಿವೆ. ಈ ೧೪ ಮಂಡಲ ಪಂಚಾಯಿತಿಗಳಲ್ಲಿ ಇಬ್ಬರು ಮುಸಲ್ಮಾನ್ ಪ್ರಧಾನರವರು ಇದ್ದಾರೆ. ನನ್ನ ಕ್ಷೇತ್ರದಲ್ಲಿ ಎಷ್ಟು ಕೋಮು ಸೌಹಾರ್ದತೆ ಇತ್ತು ಅಂದರೆ, ಎಷ್ಟು ಅನ್ಯೋನ್ಯವಾಗಿದ್ದರು ಎಂದರೆ ಎಲ್ಲರೂ ಅಣ್ಣ ತಮ್ಮಂದಿರಿಗಿಂತ ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡುತ್ತಿದ್ದರು. ಅಂತಹ ಕಡೆ ಹೊರಗಡೆಯಿಂದ ಬಂದಿರತಕ್ಕಂಥ ಜನ. ಅಧ್ಯಕ್ಷರೆ ನಾನು ಆಗಲೇ ಹೇಳಿದೆ, ನನ್ನ ಕಾರನ್ನು ತಡೆದಿರತಕ್ಕ ಜನ ಯಾರು ಎನ್ನುವುದನ್ನು ನಾನು ನೇರವಾಗಿ ಇವತ್ತಿನ ದಿವಸ ಹೇಳಬೇಕಾಗಿದೆ. ನನ್ನ ಕ್ಷೇತ್ರದಲ್ಲಿರತಕ್ಕಂಥ ಪರಿಸ್ಥಿತಿಯನ್ನು. ಈ ಹಿಂದೂ ಮತ್ತು ಮುಸಲ್ಮಾನ್ ಬಾಂಧವರ ಸೌಹಾರ್ದತೆಯನ್ನು ಏನಾದರೂ ಮಾಡಿ ಕೆಡಿಸಬೇಕು ಎನ್ನತಕ್ಕಂಥ ಹುನ್ನಾರವನ್ನು ಯಾರು ಮಾಡಿದ್ದಾರೆ **

SRI K. H. PATIL.— Let him say the name.

SRI M. MALLIKARJUNA KHARGE.— We have to take objection. On what basis he is talking.

(INTERRUPTION)

ಶ್ರೀ ಸಿ. ಬೈರೇಗೌಡ.— ಅಷ್ಟೇ ಅಲ್ಲ ಅಧ್ಯಕ್ಷರೆ ಇದರ ಸಂಪೂರ್ಣವಾದಂಥ ಜವಾಬ್ದಾರಿಯನ್ನು ಅಲ್ಲಿನ ಸ್ಥಳದಲ್ಲಿರತಕ್ಕಂಥ ಪಾಪಣ್ಣ ಎನ್ನತಕ್ಕಂಥ ಕಾಂಗ್ರೆಸ್-ಐ ಮುಖಂಡ ಮಾಡಿರತಕ್ಕಂಥಾದ್ದು. ಇದನ್ನು ನಾನು ಖಂಡಿಸಲೇಬೇಕಾಗಿದೆ. ಇವತ್ತಿನ ದಿವಸ ಯಾರು ಬೇಕಾದರೂ ಬನ್ನಿ. ನಾನು ತೋರಿಸಿಕೊಡುತ್ತೇನೆ. ಅಲ್ಲಿ ಏನು ನಡೆದಿದೆ ಎನ್ನುವುದನ್ನು ಯಾರು ಬೇಕಾದರೂ ಬರಲಿ. ನಾನು ತೋರಿಸುತ್ತೇನೆ. ಮಾನ್ಯ ಖರ್ಗೆಯವರು ಬರಲಿ ಅಥವಾ ಶ್ರೀಮತಿ ನಾಗರತ್ನಮ್ಮನವರು ಬರಲಿ, ಅಲ್ಲಿ ವಿಚಾರಿಸೋಣ, ಯಾರು ಜನಗಳನ್ನು ಪ್ರಚೋದನೆ ಮಾಡಿದ್ದಾರೆ, ಯಾರು ಜನರನ್ನು ಎತ್ತಿ ಕಟ್ಟಿದ್ದಾರೆ ಎನ್ನುವುದನ್ನು ನಾನು ತೋರಿಸಿಕೊಡುತ್ತೇನೆ.

* * *

(INTERRUPTION)

ಶ್ರೀ ಸಿ. ಬೈರೇಗೌಡ.— ಮಾನ್ಯ ಖರ್ಗೆಯವರೆ, ಇವತ್ತಿನ ದಿವಸ ಸಂಪೂರ್ಣವಾದಂಥ ಪ್ರಚೋದನೆಯನ್ನು ಮಾಡಿರತಕ್ಕಂಥಾವರು ಯಾರು ? ನಾನು ಇದನ್ನು ಉತ್ಪ್ರೇಕ್ಷೆ ಮಾಡಿ ಹೇಳ ತಕ್ಕಂಥ ಅವಶ್ಯಕತೆ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಆ ರೀತಿ ನಾವು ಹೇಳಿದ್ದೇವೆಯೇ ಅವರು ಇನ್‌ವಾಲ್ವ್ ಇದ್ದಾರೆ ಎಂದು ನಾವು ಹೇಳಿದ್ದೇವೆಯೇ ?

ಶ್ರೀ ಸಿ. ಬೈರೇಗೌಡ.— ನಾನು ಕಣ್ಣಾರೆ ಕಂಡಿರತಕ್ಕಂಥ ಘಟನೆಯನ್ನು ಹೇಳುತ್ತಾ ಇದ್ದೇನೆ. ನಡೆದ ಘಟನೆಯನ್ನು ನಾನು ಹೇಳುತ್ತಾ ಇದ್ದೇನೆ.

ಅಧ್ಯಕ್ಷರು.— ಮಾನ್ಯ ಬೈರೇಗೌಡರೇ ಕುಳಿತುಕೊಳ್ಳಿ. ಇಲ್ಲಿ ನೀವು ಪ್ರವೋಕೇಷನ್ ಮಾಡಲಿಕ್ಕೆ ಹತ್ತಿದ್ದೀರಿ.

ಶ್ರೀ ಸಿ. ಬೈರೇಗೌಡ.— ಅಧ್ಯಕ್ಷರೇ, ಪ್ರವೋಕೇಷನ್ ಅಲ್ಲ, ನಡೆದಿರತಕ್ಕಂಥ ಘಟನೆಯನ್ನು ನಾನು ಹೇಳುತ್ತಾ ಇದ್ದೇನೆ.

(ಗೊಂದಲ)

ಶ್ರೀ ಸಿ. ಬೈರೇಗೌಡ.— ನಡೆದಿರತಕ್ಕಂಥ ಘಟನೆಯನ್ನು ಹೇಳುತ್ತಾ ಇದ್ದೇನೆ, ಇವತ್ತಿನ ದಿವಸ ಖರ್ಗೆಯವರು ಬರಲಿ...

** ಅಧ್ಯಕ್ಷರ ಆದೇಶದ ಮೇರೆಗೆ ತೆಗೆದು ಹಾಕಲಾಗಿದೆ.

ಶ್ರೀ ಆರ್. ಎನ್. ನಾಯಕ್.— ಅವರು ಇದೆಲ್ಲಾ ಹೇಳುವುದು. ಚೀಫ್ ಮಿನಿಸ್ಟರ್‌ರವರಿಗೆ ಖುಷಿಯಾಗಲಿ ಎಂದು ಅವರು ಒಳಗಡೆ ಹೋಗುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದಾರೆ.

SRI M. MALLIKARJUNA KHARGE:—He himself is involved in that...

ಅಧ್ಯಕ್ಷರು.— ತಾವು ಕುಳಿತುಕೊಳ್ಳಿ.

ಶ್ರೀ ಸಿ. ಬೈರೇಗೌಡ — ನನ್ನ ಮಿತ್ರರು ಹಾಜರಿಯಲ್ಲಿ ಶ್ರೀಪವಾರ್ ಖಾರ್ಗೆಯವರೇ ಹೋಗಿ ವಿಚಾರಿಸಿಕೊಂಡು ಬರಲಿ ಯಾರು ಇದಕ್ಕೆ ಪ್ರಚೋದನೆ ನೀಡಿದ್ದಾರೆ ಎನ್ನುವುದನ್ನು ನಾನು ಅಲ್ಲಿಗೆ ಬರುವುದಿಲ್ಲ, ಅವರೇ ಹೋಗಿ ವಿಚಾರಿಸಿಕೊಂಡು ಬರಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಅವರು ಹೋಗುವುದಕ್ಕೆ ಮೊದಲು ಟ್ರಬಲ್ ಇರಲಿಲ್ಲ. ಅವರು ಹೋದ ಮೇಲೆ ಶುರುವಾಯಿತು.

ಅಧ್ಯಕ್ಷರು.— ದಯವಿಟ್ಟು ನೀವು ಕುಳಿತುಕೊಳ್ಳಿ. ಇದು ವಿಕೋಪಕ್ಕೆ ಹೋಗುತ್ತಿದೆ. ಈಗ ಯಾರಿಗೂ ನಾನು ಅವಕಾಶ ಕೊಡುವುದಿಲ್ಲ. ಮಾನ್ಯ ಬೈರೇಗೌಡರೇ, ದಯವಿಟ್ಟು ತಾವು ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಬೊಮ್ಮಾಯಿಯವರೇ ಉತ್ತರ ಹೇಳಿ.

ಶ್ರೀ ಸಿ. ಬೈರೇಗೌಡ.— ಅಧ್ಯಕ್ಷರೆ, ಇದರ ಬಗ್ಗೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಕಾಂಗ್ರೆಸ್‌ನವರು ಮಾಡಿಸಿದ್ದಾರೆ ಎನ್ನುವ ಮಾತನ್ನು ಎಕ್ಸ್‌ಪಂಜ್ ಮಾಡಬೇಕು.

ಅಧ್ಯಕ್ಷರು.— ನೋಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನೋಡೋಣ ಅಲ್ಲ. No I have to charge...

ಅಧ್ಯಕ್ಷರು.— ಈಗ ನೀವು ಅವರಿಗೆ ಶೀಲ್ಡ್ ಮಾಡಿದಿರಿ ಎಂದು ಹೇಳಿದಿರಿ, ಅದನ್ನೂ ಎಕ್ಸ್‌ಪಂಜ್ ಮಾಡುತ್ತೇನೆ. ಕಾಂಗ್ರೆಸ್ ಮುಖಂಡರು ಎನ್ನುವುದನ್ನೂ ಎಕ್ಸ್‌ಪಂಜ್ ಮಾಡುತ್ತೇನೆ. ಅವರು ಏನಾದರೂ ಡೆಫನೆಟ್ ಇತ್ತು ಅಂದರೆ ಹೆಸರು ಆಮೇಲೆ ಪೋಲೀಸರ ಹತ್ತಿರ ಹೋಗಿ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಿಮಗೆ ಗೊತ್ತಿದ್ದ ಹಾಗೆ ನಾವು ಯಾವುದಾದರೂ ಪಾರ್ಟಿ ಹೆಸರು ಆದರೂ ತೆಗೆದುಕೊಂಡಿದ್ದೆವೆಯೋ, ಅಥವಾ ಯಾರ ಹೆಸರು ಆದರೂ ತೆಗೆದುಕೊಂಡಿದ್ದವೆಯೋ? ನಾವು ಯಾರ ಹೆಸರನ್ನು ತೆಗೆದುಕೊಂಡಿಲ್ಲ,

ಅಧ್ಯಕ್ಷರು.— ಕಾಂಗ್ರೆಸ್ ಮುಖಂಡರು ಎಂದು ಹೇಳುವುದು ತಪ್ಪು.

SRI M. MALLIKARJUNA KHARGE.—He has not acted properly. He is a local MLA. He has instigated. He is responsible.

(ಗೊಂದಲ)

(ನಾಲ್ಕಾರು ಸದಸ್ಯರು ಎದ್ದು ನಿಂತು ಒಟ್ಟಿಗೆ ಮಾತನಾಡಿದರು)

ಅಧ್ಯಕ್ಷರು.—ಯಾರು ಮಾತನಾಡಿದರೂ ಈಗ ರೆಕಾರ್ಡಿಗೆ ಹೋಗುವುದಿಲ್ಲ. ಈಗ ಬೊಮ್ಮಾಯಿಯವರು ಉತ್ತರವನ್ನು ಹೇಳಬೇಕು.

ಶ್ರೀ ಸಿ. ಬೈರೇಗೌಡ.—ನೀವೇ ಹೋಗಿ ವಿಚಾರಿಸಿಕೊಂಡು ಬನ್ನಿ.

(ಗೊಂದಲ)

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ನೇರವಾಗಿ ಕಾಂಗ್ರೆಸ್‌ನವರು ಮಾಡುತ್ತಿದ್ದಾರೆಂದು ಹೇಳುತ್ತಿದ್ದಾರೆ

ಅಧ್ಯಕ್ಷರು.—ಈಗ ಆ ವಿಷಯ ಮುಕ್ತಾಯವಾಯಿತು.

SRI M. MALLIKARJUNA KHARGE.—It should be withdraen. It has became a fashion to the Government and Government member. ಅದನ್ನು ಅವರು ವಿತ್‌ಡ್ರಾ ಮಾಡಿಕೊಳ್ಳಬೇಕು.

ಅಧ್ಯಕ್ಷರು.—ನಿಮ್ಮ ಮೇಲೆ ಅವರು ಹೇಳುವುದು ಅವರ ಮೇಲೆ ನೀವು ಹೇಳುವುದು ಸರಿಯಲ್ಲ.

* * . *

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗ ಮಲ್ಲಿಕಾರ್ಜುನ ಖರ್ಗೆಯವರು ಬಹಳ ದೂರ ಹೋಗುತ್ತಿದ್ದಾರೆ. ನಾವು ತಿರುಗಿಕೊಂಡರೆ ಏನಾಗುತ್ತದೆ ಗೊತ್ತೇ ?

ಶ್ರೀ ಪಂಪಾಪತಿ.—ಮಾನ್ಯ ಉಪ ನಾಯಕರು ಹೇಳಿದಂತಹ ಮಾತು ಶಾಸನ ಸಭೆಯಲ್ಲಿ ಮಾತನಾಡುವ ಮಾತಲ್ಲ. ಇದು ಅಸಂಭವ ಇದನ್ನು ದಯವಿಟ್ಟು ಕಡತದಿಂದ ತೆಗೆಯಬೇಕು. ಇದನ್ನೆಲ್ಲ ಕೇಳಿಕೊಂಡು ಕುಳಿತುಕೊಳ್ಳುತ್ತೀರಾ ? ನಮ್ಮ ಉಪ ನಾಯಕರು ಎಲ್ಲಿ ಬೇಕಾದರೆ ಅಲ್ಲಿ ಮಕ್ಕಳನ್ನು ಮಾಡುತ್ತಾರೇನು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಕಾಂಗ್ರೆಸ್ (ಐ)ಯನ್ನು ಬ್ಲೇಮ್ ಮಾಡುತ್ತಿದ್ದಾರೆ

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಹೇಳಿದ ವಿಚಾರ ಸಭೆಗೆ ಗೌರವ ತರುವಂಥಾದ್ದು ಅಲ್ಲ ನೀವು ಮಾತ್ರ ಗಂಡಸರು, ಪುರುಷತ್ವ ಇದ್ದವರು. ಬೇರೆಯವರು ಷಂಡರು ಎನ್ನುವ ಅರ್ಥದಲ್ಲಿ ಹೇಳಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಹೇಳತಕ್ಕ ಪ್ರತಿಯೊಂದು ಮಾತಿನಲ್ಲೂ ಕಾಂಗ್ರೆಸ್ಸಿನವರನ್ನು ಪದೇ ಪದೇ ಬ್ಲೇಮ್ ಮಾಡುತ್ತಿದ್ದೀರಿ, ಅದಕ್ಕೋಸ್ಕರ ನಾನು ಹೇಳಿದೆ.

ಶ್ರೀ ಎಂ. ಭೂಪತಿ.—ತಾವು ಎಕ್ಸ್‌ಪಂಜ್ ಮಾಡಬಹುದು. ಆದರೆ ಅವರು ಡೆಪ್ಯುಟಿ ಲೀಡರ್ ಇದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಬೈರೇಗೌಡರು, ಮುನಿಸ್ವಾಮಪ್ಪನವರು ಕೆಲವು ವಿಚಾರಗಳನ್ನು ವ್ಯಕ್ತ ಮಾಡಿದ್ದಾರೆ. ಮಾನ್ಯ ಬೈರೇಗೌಡರು ಪ್ರತ್ಯಕ್ಷದರ್ಶಿಯಾಗಿ, ಅನುಭವಿಸಿ ಮಾತನಾಡಿದ್ದಾರೆ. ಸ್ವಂತ ಅವರೇ ಪ್ರತ್ಯಕ್ಷವಾಗಿ ಅನುಭವಿಸಿದ ವಿಚಾರಗಳನ್ನು ಸಭೆಯಲ್ಲಿ ಹೇಳಿದ್ದಾರೆ. ಇದರಿಂದ ವಿಚಾರಣೆಗೆ ಅನುಕೂಲವಾಗುತ್ತದೆ. ನಾನು ಹೇಳುವುದು ಸತ್ಯಾಂಶ ಅಲ್ಲವೇ ಎಂಬುದನ್ನು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಕ್ಷೇತ್ರಕ್ಕೆ ಹೋಗಿ ವಿಚಾರಣೆ ಮಾಡಲಿ ಎಂದು ಅವರೇ ಹೇಳಿದ್ದಾರೆ. ಪಕ್ಷದಲ್ಲಿ ಒಬ್ಬೊಬ್ಬರು ತಪ್ಪು ಮಾಡಿದರೆ. ಇಡೀ ಪಕ್ಷಕ್ಕೆ ಅಪಾದನೆ ಮಾಡುವುದಕ್ಕೆ ಬರುವುದಿಲ್ಲ. ಜನತಾ ಪಕ್ಷದವರು ತಪ್ಪು ಮಾಡಿದರೆ ಅವರನ್ನು ನಾವು ಖಂಡಿಸಬೇಕು. ಕಾಂಗ್ರೆಸ್ ಪಕ್ಷದವರು ತಪ್ಪು ಮಾಡಿದರೆ ಅವರನ್ನು ನಾವು ಖಂಡನೆ ಮಾಡಬೇಕು. ಇಂತಹ ವಾತಾವರಣದಲ್ಲಿ ಸೌಹಾರ್ದತೆ ತರುವಂತ ಪ್ರಯತ್ನ ಎಲ್ಲಾ ಪಕ್ಷಗಳಲ್ಲಿಯೂ ನಡೆಯಬೇಕು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇದು ಅಭ್ಯಾಸ ಬಲ.

೧೧-೩೦ ಎ. ಎಂ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ನಾಯಕರು ಪಕ್ಕದಲ್ಲಿರುವಾಗ ಅವರ ಉಪ ನಾಯಕರು ಈ ಪದವನ್ನು ಉಪಯೋಗ ಮಾಡಿದ್ದಾರೆ ಅದು ನಮ್ಮ ಸಂಸ್ಕೃತಿಯ ಮಟ್ಟವನ್ನು ತೋರಿಸುತ್ತದೆ. ದಯವಿಟ್ಟು ಈ ಭಾಷೆಯನ್ನು ಉಪಯೋಗ ಮಾಡುವುದು ಬೇಡಿ. ಅವು ತಪ್ಪಾಯಿತು ಎಂದು ಅದನ್ನು ವಾಪಸ್ಸು ತೆಗೆದುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದನ್ನು ನೀವು ಅನ್ ಪಾರ್ಲಿಮೆಂಟರಿ ಎಂದು ಟ್ರೀಟ್ ಮಾಡಿದರೆ....

MR. SPEAKER.—I will look into it.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಕ್ಕಳಿಗೆ ಟ್ರೀಟ್ ಮಾಡಿದಂತೆ ನಮಗೆ ಮಾಡಬೇಕು ನಮಗೂ ಗೊತ್ತಿದೆ. ಪ್ರತಿಯೊಂದು ಮಾತಿಗೂ...

(ಗೊಂದಲ)

** ಅಧ್ಯಕ್ಷರ ಆದೇಶದ ಮೇರೆಗೆ ತೆಗೆದು ಹಾಕಲಾಗಿದೆ.

ಶ್ರೀ ಡಿ. ಟಿ. ಜಯಕುಮಾರ್.—ಮಕ್ಕಳಿಗೆ ಟ್ರೀಟ್ ಮಾಡಿದಂತೆ ಮಾಡಬಾರದೆಂದು ಹೇಳುತ್ತೀರಿ ಆದರೆ...

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಬೇರೆಯವರ ಬಗ್ಗೆ ನೀವು ಮಾತನಾಡುವುದಕ್ಕೆ ಆಗುತ್ತದೆ. ಆದರೆ ಅದೇರೀತಿ ಬೇರೆಯವರು ಮಾತನಾಡಿದಾಗಲೂ ಅದನ್ನು ನೀವು ಸಹಿಸಿಕೊಳ್ಳಬೇಕು.

ಅಧ್ಯಕ್ಷರು.—ಮಾನ್ಯ ಖರ್ಗೆಯವರೆ, ಸ್ವಲ್ಪ ಸಮಾಧಾನವಾಗಿರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದು ಅವರಿಗೆ ಬಿಟ್ಟ ವಿಚಾರ. ಅವರು ಹೇಳಿದ್ದುದು ರೆಕಾರ್ಡ್‌ನಲ್ಲಿರಬೇಕೆಂದು ಹೇಳುವುದಾದರೆ ಅದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೆ I am an a point of order ಮಾನ್ಯ ಅಧ್ಯಕ್ಷರೆ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್...

ಅಧ್ಯಕ್ಷರು.—ನಿಮ್ಮ ಪಾಯಿಂಟ್ ಆಫ್ ಆರ್ಡರ್ ಏನು ಹೇಳಿ ?

ಶ್ರೀ ಎಂ. ರಘುಪತಿ.—ಈ ಸದನದಲ್ಲಿ, ಈ ಸದನದ ಇತಿಹಾಸದಲ್ಲಿ ಹಿಂದೆ ಒಂದು ಸಾರಿ ಒಬ್ಬ ಸದಸ್ಯರು ಇಂಥ ಪದಗಳನ್ನು ಉಪಯೋಗಿಸಿದಕ್ಕೆ ಇಡೀ ಸದನವೇ ಖಂಡನೆ ಮಾಡಿತು. ಅದು ಯಾವಾಗೆಂದರೆ, ಮಾನ್ಯ ದೇವರಾಜ ಅರಸ್‌ರವರು ವಿರೋಧ ಪಕ್ಷದ ನಾಯಕರಾಗಿದ್ದಾಗ, ಶ್ರೀಮಾನ್ ಗುಂಡೂರಾಯರು ಮುಖ್ಯಮಂತ್ರಿಗಳಾಗಿದ್ದಾಗ, ಒಬ್ಬ ಮಂತ್ರಿ ಇಂಥ ಪದಗಳನ್ನು ಉಪಯೋಗಿಸಿದಾಗ ಇಡೀ ಸಭೆಯೇ ಅವರನ್ನು ಖಂಡನೆ ಮಾಡಿತು. ಅಂಥ ಒಂದು ಸಂದರ್ಭ ಇವತ್ತು ಉದ್ಭವವಾಗಿದೆ. ಶ್ರೀಮಾನ್ ಖರ್ಗೆಯವರು ಹೇಳಿದ್ದುದು ಈ ಸಭೆಗೆ ಶೋಭೆ ತರತಕ್ಕದ್ದಲ್ಲ. ಈ ಸಭೆಯ ಗೌರವವನ್ನು ಕಾಪಾಡತಕ್ಕ ಪದಗಳಲ್ಲ. ಆದ್ದರಿಂದ ದಯವಿಟ್ಟು ಅವರು ಸಭೆಗೆ ಕ್ಷಮಾಪಣೆ ಕೇಳಬೇಕು. ಒಂದು ವೇಳೆ ಅವರು ಕ್ಷಮಾಪಣೆ ಕೇಳದಿದ್ದರೆ ಅದನ್ನು ಯಾವರೀತಿ ಕಡತದಿಂದ ತೆಗೆದುಹಾಕಬೇಕೋ ಅದನ್ನು ತೆಗೆದುಹಾಕುವುದಕ್ಕೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಆ ಮಾತು ಈ ಸಭೆಗೆ ಗೌರವ ತರುವುದಿಲ್ಲ ಎಂದು ನನ್ನ ಮನವಿ.

ಅಧ್ಯಕ್ಷರು.—ನಿಮ್ಮ ಪಾಯಿಂಟ್ ಆಫ್ ಆರ್ಡರ್ ಯೋಗ್ಯವಿದೆ. ಅವರೇ ಆಗಲೀ, ಇವರೇ ಆಗಲಿ ಯಾರೇ ಆಗಲಿ ಅನ್ನಬಾರದ್ದನ್ನು ಅಂದಿದ್ದರೆ ಅದನ್ನು ಎಕ್ಸ್‌ಪಂಜ್ ಮಾಡುತ್ತೇನೆ.

ಶ್ರೀ ಎಂ. ರಘುಪತಿ.—ಅಧ್ಯಕ್ಷರೆ, ಅವರಿಗೆ ನೀವು ವಾರನ್ ಮಾಡಬೇಕು.

(ಗೊಂದಲ)

ಅಧ್ಯಕ್ಷರು.—ನಾನು ಏನು ಹೇಳಿದೆ, ಆಡಬಾರದ ಮಾತನ್ನು ಆಡಿದ್ದರೆ, ಎಂದು ಹೇಳಿದ್ದೇನೆ.

ಶ್ರೀ ಡಿ. ಟಿ. ಜಯಕುಮಾರ್.—ಅವರು ಕ್ಷಮಾಪಣೆ ಕೇಳಲಿ.

ಅಧ್ಯಕ್ಷರು.—ನಾನು ಹೇಳುವುದನ್ನು ಕೇಳಿ. ಆಡಬಾರದ ಮಾತನ್ನು ಆಡಿದ್ದರೆ ಅದನ್ನು ಯಾರೇ ಮಾತನಾಡಿದ್ದರೂ ಅದನ್ನು ನಾನು ತೆಗೆದುಹಾಕುತ್ತೇನೆ. ಅದು ಖರ್ಗೆಯವರೇ ಇರಲಿ, ಬೈರೇಗೌಡರೇ ಇರಲಿ, ಅಥವಾ ಬೇರೆ ಯಾರೇ ಇರಲಿ ಆಡಬಾರದ ಮಾತನ್ನು ಯಾರಾದರೂ ಆಡಿದ್ದರೆ ಅದಷ್ಟನ್ನೂ ಕಡತದಿಂದ ತೆಗೆದುಹಾಕುತ್ತೇನೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಬೊಮ್ಮಾಯಿಯವರೆ ಇದನ್ನು ಇಲ್ಲಿಗೇ ಮುಕ್ತಾಯ ಮಾಡೋಣ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ ಈಗ ಮಾನ್ಯ ಬೊಮ್ಮಾಯಿಯವರು ಉತ್ತರ ಹೇಳಲಿ. ಇದನ್ನು ಇಷ್ಟಕ್ಕೇ ಮುಕ್ತಾಯ ಮಾಡೋಣ.

(ಗೊಂದಲ)

ಶ್ರೀ ಡಿ. ಟಿ. ಜಯಕುಮಾರ್.—ಅವರಿಗೆ ಛೀಮಾರಿ ಹಾಕಿ.

ಅಧ್ಯಕ್ಷರು.—ಈ ಸದನದಲ್ಲಿ ಆ ರೀತಿ ಘೀಮಾರಿ ಹಾಕುವುದಾದರೆ ಪ್ರತಿ ದಿವಸ ೧೦-೧೫ ಮಂದಿಗೆ ಘೀಮಾರಿ ಹಾಕಬೇಕಾಗುತ್ತದೆ. ಆಡಬಾರದ್ದನ್ನು ಆಡಿದ್ದರೆ ಅದನ್ನು ಎಕ್ಸ್‌ಪಂಜ್ ಮಾಡುತ್ತೇನೆ. ಅದು ಅವರೇ ಇರಲಿ, ಇವರೇ ಇರಲಿ.

(ಗೊಂದಲ)

ಶ್ರೀ ಎಂ. ರಘುಪತಿ.—ಇದು ಪರಿಹಾರವಾಗಬೇಕು.

ಅಧ್ಯಕ್ಷರು.— ಪಾಯಿಂಟ್ ಆಫ್ ಆರ್ಡರ್ ಸಾಮಾನ್ಯವಾಗಿ ಒಳ್ಳೆಯದಿರುತ್ತದೆ. ಆಡಬಾರದ್ದನ್ನು ಆಡಿದ್ದರೆ ಅದನ್ನು ತೆಗೆಸಿಹಾಕುತ್ತೇನೆಂದು ನಾನು ಹೇಳಿದ್ದೇನೆ. ಅವರೇ ಅಲ್ಲದೆ ಬೇರೆಯವರು ಹೇಳಿದ್ದರೆ ಅದನ್ನೂ ತೆಗೆಸಿಹಾಕುತ್ತೇನೆ.

(ಗೊಂದಲ)

ಶ್ರೀ ಯು. ಭೂಪತಿ.—ಅದನ್ನು ಕೇಳಿಸಿಕೊಳ್ಳುವುದಕ್ಕಾಗುವುದಿಲ್ಲ. ಗಲಾಟೆಯೊಳಗೆ ಮಾತನಾಡುತ್ತಾರೆ. ಅದು ರೆಕಾರ್ಡ್ ಆಗುವುದಿಲ್ಲ ಎಂದು. ಆದರೆ ಅದು ರೆಕಾರ್ಡ್ ಆಗಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಅವರು ಅಪಾಲಜಿ ಕೇಳಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ಸದನಕ್ಕೆ ಅಗೌರವ ಮಾಡಬೇಕು, ಸದಸ್ಯರಿಗೆ ಅಗೌರವ ಮಾಡಬೇಕು ಎಂದು ನನಗೇನೂ ಇಲ್ಲ ಆದರೆ ಪದೇ ಪದೇ ಇಂಥಾದ್ದು ಬರುತ್ತಿರುವುದರಿಂದ ಇದನ್ನು ನಾನು ಲೈಟರ್‌ವೇನಲ್ಲಿ ಹೇಳಿದೆ ಅಷ್ಟೇ ಹೊರತು ಬೇರೆ ಏನೂ ಇಲ್ಲ. ಇದರಲ್ಲಿ ಅನ್ ಪಾರ್ಲಿಮೆಂಟರಿ ಇದ್ದರೆ ಅದನ್ನು ತಾವು ತೆಗೆದುಹಾಕಬಹುದು. ತಮಗೆ ಸಂಪೂರ್ಣ ಅಧಿಕಾರವಿದೆ. ನಾನು ಅದನ್ನು ಇನ್‌ಸಿಸ್ಟ್ ಮಾಡುವುದಿಲ್ಲ.

MR. SPEAKER.—It is not in good taste. I have expunged it ಮಾ ಬೈರೇಗೌಡರೇ ದಯವಿಟ್ಟು ಕೂತುಕೊಳ್ಳಿ. ಈಗ ನೀವು ಶಾಂತಿಯಿಂದ, ಸಮಾಧಾನದಿಂದ ಅದಷ್ಟೂ ಯಾವುದೇ ಪ್ರೊವೋಕೇಷನ್‌ಗೂ ಅವಕಾಶ ಕೊಡದೆ ಮಾತನಾಡಿ ಮುಗಿಸಿ.

ಶ್ರೀ ಸಿ. ಬೈರೇಗೌಡ.—ನಾನು ನಿಜವನ್ನು ಹೇಳಿದರೆ ಅದು ಕೆಲವರಿಗೆ ಆಗುವುದಿಲ್ಲ. ಅದಕ್ಕೆ ನಾನೇನು ಮಾಡಲಿ ?

ಶ್ರೀ ಆರ್. ಎನ್. ನಾಯಕ್.—ನಿಮ್ಮ ನಿಜ ಇರಲಿ. ನಿಮ್ಮ ತಲೆಯನ್ನು ಸರಿಪಡಿಸಿಕೊಳ್ಳಿ.

(ಗೊಂದಲ)

ಶ್ರೀ ಸಿ. ಬೈರೇಗೌಡ.—ಅಲ್ಲಿ ಯಾರ್ಯಾರಿಗೆ ಏನೇನು ನಷ್ಟವಾಗಿದೆ, ಅವರ್ಯಾರಿಗೂ ಕೂಡ ಪರಿಹಾರವನ್ನು ಕೊಡತಕ್ಕ ಕೆಲಸವಾಗಿಲ್ಲ.

ಶ್ರೀ ಆರ್. ಎನ್. ನಾಯಕ್.—ನೀವು ಕೊಡಿಸಿ.

ಶ್ರೀ ಸಿ. ಬೈರೇಗೌಡ.—ಮಾನ್ಯ ನಾಯಕ್‌ರವರೇ ನೀವು ಕುಳಿತುಕೊಳ್ಳಿ

(ಗೊಂದಲ)

ಅವರು ಏತಕ್ಕೆ ಮಾತನಾಡಬೇಕು ? ಅವರು ಯಾರು ನನಗೆ ಹೇಳುವುದಕ್ಕೆ ?

(ಗೊಂದಲ)

ಶ್ರೀ ಆರ್. ಎನ್. ನಾಯಕ್.—ನಾನು ಸ್ಪೀಕರ್‌ರವರಿಗೆ ಹೇಳುತ್ತಿದ್ದೇನೆ, ನೀವು ಯಾರು ನನಗೆ ಹೇಳುವುದಕ್ಕೆ ?

ಶ್ರೀ ಸಿ. ಬೈರೇಗೌಡ.—ನಾನು ಮಾತನಾಡುವುದಕ್ಕೂ ಅವಕಾಶ ಕೊಡದಿದ್ದರೆ ಹೇಗೆ ?

(ಗೊಂದಲ)

SRI M. MALLIKARJUNA KHARGE.—No no, he should withdraw it. ಮಾನ್ಯ ಅಧ್ಯಕ್ಷರೆ, ಇದು ಏನಾಗಿದೆ ಎಂದರೆ, ಅವರಿಗೆ ಪ್ರೋತ್ಸಾಹ ಸಿಕ್ಕಿದಂತಾಗುತ್ತದೆ.

ಶ್ರೀ ಸಿ. ಬೈರೆಗೌಡ.—ಮತ್ತೆ ಕೆಲವು ಕಡೆ ಹಳ್ಳಿಗಳಲ್ಲಿ ಮನೆಗಳಿಂದ ಜನರು ಹೊರಗಡೆ ಬರುವುದಕ್ಕಾಗುತ್ತಿಲ್ಲ. ಖಾಯಿಲೆ ಬಿದ್ದಿರತಕ್ಕಂಥ ಮನುಷ್ಯರು ಯಾರು ಇದ್ದಾರೆ ಅವರನ್ನು ಆಸ್ಪತ್ರೆಗೆ ಕರೆದುಕೊಂಡುಹೋಗುವುದಕ್ಕೆ ಆಗುತ್ತಿಲ್ಲ. ಅಲ್ಲಿ ಮಕ್ಕಳು ಏನು ಇದ್ದಾರೆ ಅವರಿಗೆ ಹಾಲನ್ನು ತರಲು ಸಾಧ್ಯವಾಗದ ಪರಿಸ್ಥಿತಿ ಇದೆ. ಆದ್ದರಿಂದ ಮಕ್ಕಳು ವೃದ್ಧರು ಹೊರಗೆ ಬರಲು ಸಾಧ್ಯವಾಗದ ಕಾರಣ ರೋಗಿಗಳು ಆಸ್ಪತ್ರೆಗೆ ಹೋಗಲಿಕ್ಕೆ ಔಷಧಿಗಳನ್ನು ಪಡೆಯಲಿಕ್ಕೆ ಮತ್ತು ಒದಗಿಸಲಿಕ್ಕೆ ತಕ್ಕ ವ್ಯವಸ್ಥೆಯನ್ನು ಕೂಡ ತಾವು ದಯಮಾಡಿ ಮಾಡಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ತಿಳಿಸಿ ಪರಿಹಾರವನ್ನು ತಕ್ಷಣ ಕೊಡತಕ್ಕಂಥ ಎಲ್ಲಾ ವ್ಯವಸ್ಥೆಗಳನ್ನು ಮಾಡಬೇಕೆಂದು ತಮ್ಮಲ್ಲಿ ಮತ್ತೊಮ್ಮೆ ವಿನಂತಿ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಸಚಿವರು).—ಮಾನ್ಯ ಅಧ್ಯಕ್ಷರೇ ಇಲ್ಲಿ ನಡೆದಂಥ ಘಟನೆ ಬಹಳ ದುರ್ದೈವದ ಘಟನೆಯಾಗಿದೆ. ಶಾಂತಿಯುತರಾಗಿ ಹೋದಂಥ ಶಾಸಕರಿಗೆ ಮತ್ತು ಬೇರೆ ಬೇರೆ ನಾಯಕರಿಗೆ ಪೆಟ್ಟು ಬಿದ್ದುದು ಬಹಳ ವಿಷಾದಕರ ಸಂಗತಿ, ಇದು ಆಗಬಾರದಾಗಿತ್ತು. ಈ ಬಗ್ಗೆ ಮಾನ್ಯ ಖರ್ಗೆಯವರು ಒಂದು ಪ್ರಶ್ನೆಯನ್ನು ಎತ್ತಿದ್ದರು. ಬೇರೆ ಬೇರೆ ಸದಸ್ಯರೂ ಕೂಡ ಪ್ರಶ್ನೆ ಎತ್ತಿ ಪೋಲೀಸ್ ರಕ್ಷಣೆಯನ್ನು ಕೊಡಬೇಕಾಗಿತ್ತು ಎನ್ನುವ ಮಾತನ್ನು ಹೇಳಿದ್ದಾರೆ. ತಮಗೆ ಗೊತ್ತಿದೆ. ಈ ರಾಜ್ಯದಲ್ಲಿರತಕ್ಕಂಥ ಪೋಲೀಸ್ ಸಿಬ್ಬಂದಿ. 'ಈದಗ' ಹಬ್ಬದ ಪ್ರಯುಕ್ತ ಎಲ್ಲೆಲ್ಲಿ ಫಂಕ್ಷನ್ಸ್ ಇತ್ತು ಅಲ್ಲೆಲ್ಲಾ ಹೊರಟುಹೋಗಿದ್ದರು. ಬೇರೆ ಬೇರೆ ಭಾಗಗಳಲ್ಲಿ ರಕ್ಷಣೆಗೋಸ್ಕರವಾಗಿಯೇ ಹೋಗಿದ್ದರು. ಶಿಡ್ಲಗಟ್ಟದಲ್ಲಿ ಹೆಚ್ಚಿನ ಪೋಲೀಸ್ ರಕ್ಷಣೆ ಇತ್ತು, ಈ ಘಟನೆ ನಡೆದುದು ಶಿಡ್ಲಗಟ್ಟದಲ್ಲಿಯಲ್ಲ. ೧೫–೨೦ ಕಿಲೋಮೀಟರ್ ದೂರದಲ್ಲಿರುವ ಹಳ್ಳಿಯಲ್ಲಿ ಮತ್ತೆ ನಮ್ಮ ಶಾಸಕ ಮಿತ್ರರೂ ಕೂಡ ಪೋಲೀಸ್‌ನವರಿಗೆ ತಿಳಿಸದೆ ಹೋಗಿದ್ದಾರೆ. ನಾವು ಶಾಂತಿಗಾಗಿ ಹೋಗುತ್ತಿರಬೇಕಾದರೆ ಪೋಲೀಸ್‌ನವರು ಜೊತೆಯಲ್ಲಿದ್ದರೆ ಒಂದು ರೀತಿ ತಿಳಿಯುತ್ತಾರೆಂದು ತಿಳಿದುಕೊಂಡು ಅವರೇ ಹೋಗಿದ್ದರು.

ಶ್ರೀಮತಿ ಮುಕ್ತಾರ್ ಉನ್ನಿಸ.—ಶಾಸಕರು ಹೋಗುವ ಬಗ್ಗೆ ಪತ್ರಿಕೆಗಳಲ್ಲಿ ಬಂದಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಪತ್ರಿಕೆಗಳಲ್ಲಿ ಶಾಸಕರು ಶಿಡ್ಲಗಟ್ಟಕ್ಕೆ ಭೇಟಿ ಕೊಡುತ್ತಾರೆಂದು ಇದ್ದರೂ ಇಷ್ಟು ಸಮಯಕ್ಕೆ ಹೋಗುತ್ತಾರೆನ್ನುವುದು ಇರಲಿಲ್ಲ. ಶಾಸಕರು ಕೂಡ ಪೋಲೀಸರ ಸಹಾಯವನ್ನು ಕೇಳಲಿಲ್ಲ, ಅವರ ಜೊತೆಯಲ್ಲಿ ಹೋಗುವುದು ಬೇಡವೆಂದು ಇಂಡಿಪೆಂಡೆಂಟ್ ಆಗಿ ಹೋಗಿ ಶಾಂತಿಯನ್ನು ಉಂಟುಮಾಡಲು ಏನೇನು ಮಾಡಬೇಕು ಅದನ್ನು ಮಾಡಲು ಹೋದಾಗ ಈ ದುರ್ದೈವದ ಘಟನೆಯಾಯಿತು. ಈ ಘಟನೆಯಾದಾಗ ಶಾಸಕ ಮಿತ್ರರಾದ ಮಾನ್ಯ ರಮೇಶ್‌ಕುಮಾರ್ ಮತ್ತು ರೋಷನ್‌ಬೇಗ್ ಅವರಲ್ಲಿ ಬೇರೆ ಬೇರೆ ರೀತಿಯಲ್ಲಿ ಈ ಜನ ನಡೆದುಕೊಂಡಿದ್ದಾರೆಂದು ಮಾನ್ಯ ಖರ್ಗೆಯವರು ಬಂದು ಹೇಳಿದರು. ಅವರಿಬ್ಬರೂ ಮೂವರೇ ಇರಲಿಲ್ಲ. ಅವರ ಜೊತೆಯಲ್ಲಿ ೩೦-೪೦ ಜನರು ಇದ್ದರು. ಅವರನ್ನು ತಡೆದಿದ್ದಾರೆ ಒಳಗಡೆ ಇದ್ದವರನ್ನು ಸೊಸೈಟಿಯ ಶಟರ್ಸ್‌ನ್ನು ಕಿತ್ತು ಹೊಡೆದಿದ್ದಾರೆ. ಸುದೈವದಿಂದ ಅವರು ಉಳಿದಿದ್ದಾರೆ, ಏನೇ ಆಗಿರಲಿ ಈ ಬಗ್ಗೆ ಸುಮಾರು ಜನರನ್ನು ಅರೆಸ್ಟ್ ಮಾಡಿದ್ದೇವೆ ಅವರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಆ ವಿವರಗಳ ಬಗ್ಗೆ ಹೇಳಬೇಕೆಂದು ಹೇಳಿರುತ್ತಾರೆ. ಅದರ ಬಗ್ಗೆ ಈಗ ಹೇಳಬೇಕಾದ ಅವಶ್ಯಕತೆ ಇಲ್ಲ, ಮಾನ್ಯ ಖರ್ಗೆಯವರು ವಿವರಗಳನ್ನು ಕೊಡಬೇಕೆಂದು ಕೇಳಿದ್ದಾರೆ. ಆದರೆ ಈಗ ಅದು ಅಷ್ಟು ಸೂಕ್ತವಲ್ಲವೆಂದು ವಿವರಗಳನ್ನು ಕೊಡುತ್ತಿಲ್ಲ. ಒಂದು ಮಾತು ಹೇಳಬೇಕಾಗುತ್ತದೆ. ಇಂಥ ಜಾತೀಯ ಗಲಭೆಗಳು ನಡೆದಾಗ ಪೋಲೀಸರು ತಮ್ಮ ಕರ್ತವ್ಯವನ್ನು ಮಾಡಬೇಕು. ಮೊದಲೇ ಗುಪ್ತ ದಳದಿಂದ ತಿಳುವಳಿಕೆ ಪಡೆಯಬೇಕು ಮತ್ತು ಸೂಕ್ತವಾದ ಕ್ರಮ ಕೈಗೊಳ್ಳಬೇಕು, ಇದನ್ನು ನಾನು ಒಪ್ಪುತ್ತೇನೆ. ಆದರೆ ಇದರಲ್ಲಿ ಸಾರ್ವಜನಿಕ ಮುಖಂಡರ ಪಾತ್ರ ದೊಡ್ಡದು. ರಾಜಕೀಯ ಪಕ್ಷಗಳ ಮುಖಂಡರ ಪಾತ್ರವೂ ದೊಡ್ಡದು. ನಾವೆಲ್ಲಾ ಸಹಕಾರ ಮಾಡದೆ ಹೋದರೆ ಬರೀ ಪೋಲೀಸರಿಂದ ಸರ್ಕಾರಿ ಅಧಿಕಾರಿಗಳಿಂದ ಶಾಂತಿ ನೆಲಸುವುದಕ್ಕಾಗುವುದಿಲ್ಲ. ಇಂಥ ಗಲಭೆಗಳು ಉಂಟಾದಾಗ ತಡೆಯುವುದು ಕಷ್ಟವಾಗುತ್ತದೆ. ಈಗ ಶಿಡ್ಲಘಟ್ಟದಲ್ಲಿ ಎಲ್ಲಾ ಕೋಮಿನ ನಾಯಕರ ಮತ್ತು ಶಾಸಕ ಪ್ರಯತ್ನದಿಂದ ತಿಳಿ ವಾತಾವರಣ ಬಂದಿದೆ. ಕೋಲಾರ ಜಿಲ್ಲೆಯಲ್ಲಿ ಕೂಡ ಅಲ್ಲಲ್ಲಿ ಪ್ರಕ್ಷುಬ್ಧ ವಾತಾವರಣ ಇದೆ, ಅದಕ್ಕಾಗಿ ಮನವಿ ಮಾಡಿಕೊಳ್ಳುತ್ತಿದ್ದೇನೆ, ಎಲ್ಲಾ ರಾಜಕೀಯ ಪಕ್ಷಗಳ ನಾಯಕರು ಒಪ್ಪಿದರೆ ಸೋಮವಾರ ಅಥವಾ ಮಂಗಳವಾರ ಅಥವಾ ಯಾವತ್ತಾದರೂ ಒಂದು ದಿವಸ

ಶಿಡ್ಲಘಟ್ಟಕ್ಕೆ ಹೋಗಿಬರೋಣವೆಂದು ಸಲಹೆ ಕೊಡುತ್ತಿದ್ದೇನೆ. ಜೊತೆಗೆ ಕೋಲಾರಕ್ಕೂ ಹೋಗಿ ಬರೋಣ, ಏತಕ್ಕೆಂದರೆ ಅದು ಜಿಲ್ಲಾ ಸ್ಥಳ. ಪ್ರತಿಪಕ್ಷದಿಂದ ಯಾರು ಬರುತ್ತಾರೆ. ಅವರ ಜೊತೆ ಹೋಗತಕ್ಕ ವಿಚಾರ ಮಾಡುತ್ತಿದ್ದೇನೆ. ಸಾಮೂಹಿಕವಾಗಿ ಹೋಗಿ ನಾವು...

ಶ್ರೀ ಕೆ.ಬಿ. ಶಾಣಪ್ಪ.—ಜಿಲ್ಲಾ ಪಕ್ಷದವರು ಹೋದರೆ...

ಶ್ರೀ ಎಸ್. ಆರ್. ಬೊಮ್ಮಾಯಿ.—ಸಾಮೂಹಿಕವಾಗಿ ಹೋಗೋಣವೆಂದು ನನ್ನ ಒಂದು ಸಲಹೆ

(ಶ್ರೀ ಬೈರೇಗೌಡರು ಮಾತನಾಡಲು ನಿಂತರು)

ಅಧ್ಯಕ್ಷರು.—ಅವರು ಉತ್ತರ ಹೇಳುತ್ತಿದ್ದಾರೆ, ದಯವಿಟ್ಟು ನೀವು ಕುಳಿತುಕೊಳ್ಳಿ

ಶ್ರೀ ಎಸ್. ಆರ್. ಬೊಮ್ಮಾಯಿ.—ಯಾವಾಗ ಹೋಗಬೇಕು, ಎಂದು ಹೋಗಬೇಕು ಎಂಬುದನ್ನು ಆಲೋಚನೆ ಮಾಡೋಣ. ಇದು ಅವಶ್ಯಕ. ಕೋಲಾರದಲ್ಲಿ ಶಿಡ್ಲಘಟ್ಟದಲ್ಲಿ ಸಲ್ಲದ ಸುದ್ದಿಗಳನ್ನು ಹಬ್ಬಿಸಿ ಜನರನ್ನು ರೊಚ್ಚಿಗೇಳಿಸತಕ್ಕದ್ದು ನಡೆಯುತ್ತಿದೆ. ಮಾನ್ಯ ಸದಸ್ಯರಾದ ಮುನಿಸ್ವಾಮಪ್ಪನವರನ್ನು ಕೇಳಿದೆ, ಹೇಗೆ ಹಳ್ಳಿ ಹಳ್ಳಿಗೆ ಒಯ್ದಿದ್ದಾರೆ ಮತ್ತು ಸುಳ್ಳು ಸುದ್ದಿಗಳನ್ನು ಹೇಗೆ ಹಬ್ಬಿಸಿದ್ದಾರೆ ಎಂದು. ಅದನ್ನು ನಿಲ್ಲಿಸುವುದಕ್ಕೆ ನೂರಾರು ಜನರಿಗೆ ತಿಳುವಳಿಕೆ ಕೊಟ್ಟು ಕಳುಹಿಸಿದ್ದೇವೆ ಸುಳ್ಳು ಪ್ರಚಾರದಿಂದ ಉದ್ರಿಕ್ತ ವಾತಾವರಣ ಉಂಟಾಗಿದೆ, ಅದನ್ನು ನಾವು ತಡೆಯಬೇಕಾಗುತ್ತದೆ. ಶಾಂತಿಯ ದೃಷ್ಟಿಯಿಂದ ಮಾನ್ಯ ಸದಸ್ಯರ ಜೊತೆ ಆಲೋಚನೆ ಮಾಡಿ ಒಂದು ದಿನ ಹೋಗಿಬರತಕ್ಕ ವ್ಯವಸ್ಥೆ ಮಾಡುತ್ತೇನೆ. ದಯವಿಟ್ಟು ಎಲ್ಲರೂ ಇದಕ್ಕೆ ಸಹಕರಿಸಬೇಕು.

ಶ್ರೀ ಬಿ. ಬಸವಲಿಂಗಪ್ಪ.—ನೀವೇನು ಹೋಂ ಮಿನಿಸ್ಟರೆ? ರೆವಿನ್ಯೂ ಮಂತ್ರಿಗಳಾಗಿ ಬರುತ್ತಿದ್ದೀರಿ.

ಅಧ್ಯಕ್ಷರು.—ಮಾಜಿ ಹೋಂ ಮಿನಿಸ್ಟರನ್ನು ಕರೆದುಕೊಂಡು ಹೋಗಿ,

ಶ್ರೀ ಎಸ್.ಆರ್. ಬೊಮ್ಮಾಯಿ.—ಪೋಲೀಸರ ನಡತೆ ಬಗ್ಗೆ, ಎಚ್ಚರಿಕೆಯ ಬಗ್ಗೆ ಬಿಗಿಯಾದ ಆಡಳಿತ ವ್ಯವಸ್ಥೆ ಇದೆ. ಇಂಥ ಘಟನೆ ನಡೆದಾಗ...

ಶ್ರೀ ಬಿ. ಬಸವಲಿಂಗಪ್ಪ.—ಬಿಗಿ ಅಂದರೆ ಏನು ಎಂದು ಹೇಳಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ದಕ್ಷತೆ, ನಿಷ್ಠೆ ಎಲ್ಲಾ ಅದರಲ್ಲಿ ಬರುತ್ತದೆ. ಬಿಗಿಯಾದ ಆಡಳಿತದಲ್ಲಿ ಅದೆಲ್ಲಾ ಬರುತ್ತದೆ. ಈ ಘಟನೆ ನಡೆದಾಗ ಪೋಲೀಸ್ ಇಲಾಖೆಯನ್ನು ಟೀಕೆ ಮಾಡುತ್ತಾರೆ, ಮಾಡಬೇಕಾಗುತ್ತದೆ. ಕರ್ನಾಟಕ ಪೋಲೀಸರು ದಕ್ಷತೆ ಬಗ್ಗೆ, ಅವರ ಕರ್ತವ್ಯ ನಿಷ್ಠೆ ಬಗ್ಗೆ ದೇಶದಲ್ಲಿ ಒಳ್ಳೆಯ ಹೆಸರನ್ನು ಪಡೆದಿದ್ದಾರೆ. ಅಲ್ಲಿ, ಇಲ್ಲಿ ತಪ್ಪು ಮಾಡತಕ್ಕ ಅಧಿಕಾರಿಗಳು ಇದ್ದಾರೆ. ಅವರ ಮೇಲೆ ಉಗ್ರ ಕ್ರಮ ಕೈಗೊಳ್ಳಬೇಕಾಗುತ್ತದೆ. ಅದನ್ನು ನಾನು ಒಪ್ಪುತ್ತೇನೆ. ಆದರೆ ಇಡೀ ಇಲಾಖೆಯನ್ನು ಟೀಕೆ ಮಾಡತಕ್ಕದ್ದು ಸರಿಯಲ್ಲ. ತಪ್ಪು ಮಾಡಿದವರ ಮೇಲೆ ಕ್ರಮ ಕೈಗೊಳ್ಳೋಣ ಇವತ್ತು ಹೆಚ್ಚು ವಿಚಾರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಸರ್ಕಾರ ಈಗಾಗಲೇ ಕ್ರಮಗಳನ್ನು ಕೈಗೊಂಡಿದೆ. ಕೋಲಾರ ಜಿಲ್ಲೆಯಲ್ಲಿ ಶಾಂತಿ ಪರಿಪಾಲನೆಗೆ ಭದ್ರವಾದ ವ್ಯವಸ್ಥೆಯನ್ನು ಮಾಡಿ ಇನ್ನೂ ಹೆಚ್ಚಿನ ಅವಶ್ಯಕತೆ ಬಿದ್ದರೆ ಮಾಡುತ್ತೇವೆಂಬ ಭರವಸೆ ಕೊಡುತ್ತೇನೆ. ಮಾನ್ಯ ಮುನಿಸ್ವಾಮಪ್ಪನವರು ಹೇಳಿದರು ಲೋಕಲ್ ಪೊಲಿಟಿಕ್ಸ್ ಆ ಒಂದು ಮಟ್ಟಕ್ಕೆ ಹೋಗುತ್ತಿದೆ ಎಂದು. ಈ ಬಗ್ಗೆ ರಾಜಕೀಯ ಮುಖಂಡರು ತಿಳುವಳಿಕೆ ಕೊಟ್ಟು ಚಿಕ್ಕಪುಟ್ಟ ಭಿನ್ನಾಭಿಪ್ರಾಯಗಳನ್ನು ಸರಿಪಡಿಸಿದರೆ ಶಾಂತಿಗೆ ಸುಗಮವಾದ ಮಾರ್ಗವಾಗುತ್ತದೆಂಬ ನಂಬಿಕೆ ಇದೆ. ಅದನ್ನು ಮಾಡೋಣ. ಪರಿಹಾರದ ಬಗ್ಗೆ ಈಗಾಗಲೇ ರಿಪೋರ್ಟ್ ಕೇಳಿದ್ದೇನೆ. ನಾಳೆ ನಾಡಿದ್ದು ವರದಿ ಬರುತ್ತದೆ ಬಂದಮೇಲೆ ಸೂಕ್ತ ಪರಿಹಾರ ಕೊಡುತ್ತೇನೆ. ಡಿ.ಸಿ. ಯವರಿಂದ ಕೂಡಲೇ ರಿಪೋರ್ಟ್ ತರಿಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಒಂದು ವಾರದಲ್ಲಿ ಪರಿಹಾರ ಕೊಡುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ.—ಸೂಕ್ತ ಪರಿಹಾರ ಎಂದರೆ ಏನು?

ಶ್ರೀ ಎಸ್.ಆರ್. ಬೊಮ್ಮಾಯಿ.—ಸೂಕ್ತ ಅಂದರೆ ನಿಯಮಕ್ಕೆ ಅನುಗುಣವಾಗಿ ಕೊಡುತ್ತೇನೆ

ಅಧ್ಯಕ್ಷರು.—ಈ ವಿಷಯ ಇಲ್ಲಿಗೆ ಮುಕ್ತಾಯವಾಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೪ ವರ್ಷಗಳಿಂದ...

ಅಧ್ಯಕ್ಷರು.—ಎಲ್ಲರ ಹಿತದೃಷ್ಟಿಯಿಂದ, ಸದನದ ಗೌರವದ ದೃಷ್ಟಿಯಿಂದ ಇದನ್ನು ಮುಂದುವರಿಸುವುದು ಬೇಡ. ಈ ವಿಷಯ ಮುಕ್ತಾಯವಾಗಿದೆ. ಮುಂದಿನ ವಿಷಯ ಗಮನ ಸೆಳೆಯುವುದು. ಮಾನ್ಯ ದೊಡ್ಡಮೇಟಿಯವರೇ, ಕೇಳಿ.

ಅಧ್ಯಕ್ಷರು.—ಈಗ ಮಾನ್ಯ ದೊಡ್ಡ ಮೇಟಿಯವರೇ, ನೀವು ಕಾಲಿಂಗ್ ಅಟೆನ್ಷನ್ ಕೇಳಿ. ಗಮನ ಸೆಳೆಯಿರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದು ಮುಖ್ಯವಾದ ವಿಚಾರ. ಇದು ತುಮಕೂರಿಗೂ ಹರಡಿದೆ ಬೇರೆ ಕಡೆಗೂ ಹರಡುತ್ತಿದೆ. ಅನೇಕ ವಿಷಯಗಳು ಹೊರಗೆ ಬರುತ್ತವೆ. ಕಾಂಗ್ರೆಸ್ಸಿನವರು ಕಮ್ಯುನಿಸ್ಟ್‌ನವರು, ಜನತಾದವರು...

ಅಧ್ಯಕ್ಷರು.—ಆಗುವುದಿಲ್ಲ. ಮಾನ್ಯ ದೊಡ್ಡಮೇಟಿಯವರೇ ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೆ...

ಅಧ್ಯಕ್ಷರು.—ಆ ವಿಷಯ ಮುಕ್ತಾಯವಾಗಿದೆ. ದಯವಿಟ್ಟು ನೀವು ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಅನೇಕ ಅಲಿಗೇಷನ್ಸ್ ಮಾಡಿದ್ದಾರೆ. ಅದೆಲ್ಲಾ ಹೊರಗೆ ಬರಲಿ. ಯಾರುಯಾರು ಏನೇನು ಮಾಡಿದ್ದಾರೆ ಹೊರಗೆ ಬರಲಿ.

ಅಧ್ಯಕ್ಷರು.—ಆ ವಿಷಯ ಮುಕ್ತಾಯ ಮಾಡಿದ್ದೇನೆ. ಈಗ ದೊಡ್ಡಮೇಟಿಯವರ ಕಾಲಿಂಗ್ ಅಟೆನ್ಷನ್.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹೀಗೆ ಮುಕ್ತಾಯ ಮಾಡಿ ಮಾಡಿ ನಮ್ಮನ್ನೇ ಮುಕ್ತಾಯ ಮಾಡುತ್ತೀರಿ.

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೇ, ಇದು ಬಹಳ ಮುಖ್ಯವಾದ ವಿಷಯ ಇದೆ. (ಕೈಯಲ್ಲಿ ಪತ್ರಿಕೆಯನ್ನು ಹಿಡಿದು ತೋರಿಸುತ್ತಾ ಹೇಳಿದರು.)

ಅಧ್ಯಕ್ಷರು.—ಅದನ್ನು ಕಳುಹಿಸಿ ನೋಡುತ್ತೇನೆ.

2. ಗದಗ್ ಬಸ್ ನಿಲ್ದಾಣದಲ್ಲಿ ಧಾರವಾಡ ಜಿಲ್ಲಾ ಪರಿಷತ್ ಸದಸ್ಯ ಸೋಮಣ್ಣ ಹರ್ಲಾಪುರ ಇವರ ಮೇಲೆ ಪೋಲೀಸರು ನಡೆಸಿದ ಹಲ್ಲೆಯ ಬಗ್ಗೆ.

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ.—ಮಾನ್ಯ ಅಧ್ಯಕ್ಷರೆ, ದಿನಾಂಕ ೪-೪-೧೯೮೮ರಂದು ರಾತ್ರಿ ೯-೩೦ ಗಂಟೆಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಗದಗ ಬಸ್ ನಿಲ್ದಾಣದಲ್ಲಿ ಧಾರವಾಡ ಜಿಲ್ಲಾ ಪರಿಷತ್ ಸದಸ್ಯ ಶ್ರೀ ಸೋಮಣ್ಣ ಹರ್ಲಾಪುರ ಹಾಗೂ ಪ್ರಯಾಣಿಕರ ಮೇಲೆ ಪೋಲೀಸ್ ಸಬ್-ಇನ್ಸ್‌ಪೆಕ್ಟರ್ ಮತ್ತು ಪೋಲೀಸರು ನಡೆಸಿದ ಹಲ್ಲೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ).—

ದಿನಾಂಕ ೪-೪-೧೯೮೮ರಂದು ಶ್ರೀ ತೋಂಟದಾರ್ಯಸ್ವಾಮಿಗಳ ಮಠದ ಜಾತ್ರೆಯು ಗದಗ್‌ನಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಅಕ್ಕಪಕ್ಕದ ಹಳ್ಳಿಗಳಿಂದ ಸುಮಾರು ೩೦,೦೦೦ ಜನರು ಬಂದಿದ್ದರು. ಜಾತ್ರೆ ಮುಗಿದ ನಂತರ, ಅವರುಗಳು ತಮ್ಮ ತಮ್ಮ ಸ್ಥಳಗಳಿಗೆ ವಾಪಸ್ಸು ಹೋಗುವ ಆತುರದಲ್ಲಿ, ಕೆ.ಎಸ್.ಆರ್.ಟಿ.ಸಿ. ಬಸ್ಸುಗಳಲ್ಲಿ ಸ್ಥಳಾವಕಾಶವಿಲ್ಲದಿದ್ದುದರಿಂದ ಅದರ ಮೇಲ್ಭಾಗದಲ್ಲೂ ಸಹ ಕುಳಿತಿದ್ದರು.

ಹೊಳೆ ಆಲೂರು ಹಳ್ಳಿಗೆ ಹೋಗುವ ಬಸ್ಸಿನ ಮೇಲೂ ಸಹ ಪ್ರಯಾಣಿಕರು ಕುಳಿತಿದ್ದರು. ಆ ವಾಹನದ ಚಾಲಕ ಮತ್ತು ನಿರ್ವಾಹಕರು ಪ್ರಯಾಣಿಕರಿಗಾಗಿ ಸಾಗಿಸಲು ಹೆಚ್ಚಿನ ಬಸ್ಸುಗಳು ಕಳುಹಿಸಿಕೊಡುವಂತೆ ಡಿಪೋ ಮ್ಯಾನೇಜರ್‌ನ್ನು ವಿನಂತಿಸಿಕೊಳ್ಳುವುದಾಗಿ ಭರವಸೆಯನ್ನು ಕೊಟ್ಟರು. ಆದರೆ